ಮಾರ್ಚ್ 2022 ಸಂಪುಟ 18
ಸಂಚಿಕೆ 03
ಸಂಚಿಕೆ ಬೆಲೆ ರೂ. 1/-

ಬಂಟರ ಸಂಘ ಬೆಂಗಳೂರು
BUNTS' SANGHA BANGALORE
www.buntsanghablr.com

# ಸ್ನೇಹ ಚಿಂತನೆ

ಮಾಸ ಪತ್ರಿಕೆ



ವಿದ್ಯಾರ್ಥಿ ವೇತನ ಮತ್ತು ಪ್ರಶಸ್ತಿ ಸಮಿತಿ ವತಿಯಿಂದ ವಿದ್ಯಾದೀವಿಗೆ ಚೆಕ್ ವಿತರಣೆ







ವೈದ್ಯಕೀಯ ವಿಭಾಗದ ವತಿಯಿಂದ ವೈದ್ಯಕೀಯ ಶಿಬಿರ

324, Chord Road, Vijayanagara
Bengaluru - 560 040.
Ph: 080 2339 9323/ 2339 9635
E: info@buntsanghablr.com

# ಬಂಟರ ಸಂಘ ಬೆಂಗಳೂರು

## ಚುನಾವಣೆ : 2022-24



**ಸಮುದಾಯ ಬಾಂಧವರಲ್ಲಿ ಪ್ರೀತಿ ಪೂರ್ವಕ ವಿನಂತಿ,**

ಬೆಂಗಳೂರು ಬಂಟರ ಸಂಘದಲ್ಲಿ ವಿವಿಧ ಉಪ ಸಮಿತಿಗಳಲ್ಲಿ ತೊಡಗಿಸಿಕೊಂಡು ಹಿಂದೆ ಎರಡು ಬಾರಿ ಕಾರ್ಯಕಾರಿ ಸಮಿತಿ ಸದಸ್ಯನಾಗಿ, ಸಮಾಜ ಸೇವಾ ಸಮಿತಿಯ ಚೇರ್‌ಪರ್ಸನ್ ಆಗಿ ಸಮುದಾಯದೊಂದಿಗೆ ನಿರಂತರ ಸಂಪರ್ಕದಲ್ಲಿದ್ದೇನೆ. ಸಂಘದ ಹೊರತಾಗಿಯೂ ಸಮಾಜ ಬಾಂಧವರೊಂದಿಗಿನ ನಿರಂತರ ಸಂವಹನದ ಮೂಲಕ ನಿಮ್ಮೊಂದಿಗಿದ್ದವನು ನಾನು. ಇದೀಗ ಮುಂಬರುವ ಬೆಂಗಳೂರು ಬಂಟರ ಸಂಘದ ಚುನಾವಣೆಯಲ್ಲಿ **ಖಜಾಂಚಿ** ಹುದ್ದೆಗೆ ಸೇವಾಕಾಂಕ್ಷಿಯಾಗಿದ್ದೇನೆ.

ತಮ್ಮ ಮಾರ್ಗದರ್ಶನ, ಸದಾಶಯ ಹಾಗೂ ಶುಭಾಶೀರ್ವಾದಗಳು ಎಂದಿಗೂ ನನ್ನೊಂದಿಗೆ ಇರಲಿ ಎಂಬ ಪ್ರಾರ್ಥನೆಯೊಂದಿಗೆ,

ಇಂತಿ ನಿಮ್ಮವ

**ಅಮರನಾಥ್ ಶೆಟ್ಟಿ ಎಚ್.**

ಮಾಜಿ ಕಾರ್ಯಕಾರಿ ಸಮಿತಿ ಸದಸ್ಯ
2014-16 ಮತ್ತು 2016-2018

ಡೈರೆಕ್ಟರ್ - ಸ್ಮಾರ್ಟ್ ಲೈನರ್ ಇಂಡಿಯಾ ಪ್ರೈ. ಲಿ.,

ಮೊ : 98440 72857

**'ಸಮುದಾಯದ ಅಭಿವೃದ್ಧಿಗಾಗಿ ಸಮಗ್ರ ತಂಡದ ಆಯ್ಕೆ'**

ADVT.

# ಸ್ನೇಹ ಚಿಂತನೆ

*Monthly Magazine Published by*

**BUNTS' SANGHA BANGALORE**

**VOL. 18** **MARCH 2022** **ISSUE 03**



**ಸಾಹಿತ್ಯ–ಪ್ರಕಾಶನ ಸಮಿತಿ**

ಚೇರ್‌ಪರ್ಸನ್ ಮತ್ತು ಗೌ॥ ಸಂಪಾದಕರು :
**ಶ್ರೀ ಎಂ. ಮುರಲೀಧರ ಹೆಗ್ಡೆ**

ಸಲಹಾ ಮಂಡಳಿ :
**ಶ್ರೀ ಎ. ಗಿರೀಶ್ ರೈ**
**ಶ್ರೀ ಸತ್ಯಾನಂದ ಮೇಲಾಂಟ ಎನ್.**
**ಶ್ರೀ ಪ್ರಕಾಶ್ ಶೆಟ್ಟಿ**

ಸಂಪಾದಕ ಮಂಡಳಿ :
**ಶ್ರೀಮತಿ ಸ್ಮಿತಾ ಬಲ್ಲಾಳ್**
**ಶ್ರೀಮತಿ ನಿರ್ಮಲಾ ಸಿ. ರೈ**
**ಡಾ॥ ಶಾಲ್ಮಲೀ ಸುರೇಶ್**
**ಶ್ರೀಮತಿ ಶ್ಯಾಮಲಾ ಶೆಟ್ಟಿ**
**ಶ್ರೀಮತಿ ಅನುಷಾ ಶೆಟ್ಟಿ**

ಪೋಷಕ ಸದಸ್ಯರು :
**ಶ್ರೀಮತಿ ಮನೋರಮ ಚೌಟ**
**ಶ್ರೀಮತಿ ವೇದ ಎಸ್. ಶೆಟ್ಟಿ**
**ಶ್ರೀ ಬಿ. ಕುಸುಮಾಕರ ಶೆಟ್ಟಿ**
**ಶ್ರೀ ಆರ್.ಎಸ್. ಶೆಟ್ಟಿ**
**ಶ್ರೀಮತಿ ವಸಂತಿ ಪಿ. ಶೆಟ್ಟಿ**
**ಶ್ರೀ ಪ್ರಕಾಶ್ ಶೆಟ್ಟಿ**
**ಶ್ರೀ ಎ.ಜೆ. ಶೆಟ್ಟಿ**
**ಶ್ರೀಮತಿ ಗೀತ ಭಗವಾನ್‌ದಾಸ್ ರೈ**
**ಶ್ರೀ ಕೆ. ಶಂಕರ್ ಶೆಟ್ಟಿ ಹುಬ್ಬಳ್ಳಿ**
**ಶ್ರೀ ಶ್ರೀನಿವಾಸ ಸೂಡ**

ಪ್ರಕಾಶಕರು :
**ಮಧುಕರ ಎಂ. ಶೆಟ್ಟಿ**



ಈ ಸಂಚಿಕೆಯಲ್ಲಿ ಪ್ರಕಟವಾದ ಲೇಖನಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದ್ದು, ಇದರಲ್ಲಿ ಬಂಟರ ಸಂಘಕ್ಕೆ ಯಾವುದೇ ತೆರನಾದ ಜವಾಬ್ದಾರಿ ಇರುವುದಿಲ್ಲ.

**– ಸಂಪಾದಕ ಮಂಡಳಿ**


## ಒಳ ಪುಟಗಳಲ್ಲಿ...


| | | ಪುಟ |
|---|---|---|
| 1. | ಸಂಪಾದಕೀಯ | 2 |
| 2. | ಅಧ್ಯಕ್ಷರ ಮಾತು | 3 |
| 3. | ಗೌರವ ಕಾರ್ಯದರ್ಶಿಗಳ ವರದಿ | 4 |
| 4. | Handing over of project BSRNSV-II | 7 |
| 5. | Health check up camp organised by Doctors' Wing | 9 |
| 6. | ಉದಯೋನ್ಮುಖ ಬಂಟ ಪ್ರತಿಭೆಗಳು | 11 |
| 7. | Report on career counselling programme | 23 |
| 8. | ಇರುಳು ರಸ್ತೆಯಲ್ಲಿ ಬೆಳಕಿನ ಯುದ್ಧ | 24 |
| 9. | ಕೊಂಕುಜೀವಿಯ ಮೆಲುಕು – 5 | 25 |
| 10. | ಎಲ್ಲರೊಳಗೊಂದಾಗು | 27 |


**ಮುಖಪುಟ**

**ವಿದ್ಯಾರ್ಥಿ ವೇತನ ಮತ್ತು ಪ್ರಶಸ್ತಿ ಸಮಿತಿಯಿಂದ ವಿದ್ಯಾದೀವಿಗೆ ಚೆಕ್ ವಿತರಣೆ**

**ವೈದ್ಯಕೀಯ ವಿಭಾಗದ ವತಿಯಿಂದ ವೈದ್ಯಕೀಯ ಶಿಬಿರ**



# Editorial

**Leadership: The Art of Influencing People**

A leader is one who knows the way, goes the way, and shows the way.

*- John C. Maxwell*

What makes a good leader? The answer to this could be many. Simply put, a leader is an individual who inspires confidence in others and moves them to action. Fundamentally, leaders create a vision and then align people to help them realise it. But the bigger question is what is leadership and why is it important in various contexts, be it a large MNC or a charitable organization.

Leadership is often described as an art of motivating a group of people to act towards achieving a common goal. Leaders do this through a mixture of motivation, influence, open communication and confidence they exude.

Having established why leadership is important, now let's look at what makes a good leader. In my opinion, there are several pertinent attributes that makes a distinguished leader. Whether you are leading a global company or a charitable institution, the type of leadership you use can make all the difference.

According to me, there are 6 characteristics of an exemplary leader as stated below:

**Vision**

Vision is a mental picture of the future. It is an idea of what the future can hold, but has not yet happened. As a leader you have to look forward and see where you and the organization are headed. A leader needs to create a vision that clearly defines where your team is going and how they are going to get there.

*As Ralph Lauren says – "A leader has the vision and conviction that a dream can be achieved. He inspires the power and energy to get it done."*

**Courage**

Courage is often described as a lynchpin of leadership. It is something that empowers a leader to follow their guts, make bold decisions, and put forth ground-breaking ideas or solutions. Courage is what the followers want you as a leader to emanate so that they may rely on you or your decisions without hesitation.

*Narayan Murthy famously said – "The most critical quality of a great leader is courage. To dream big and make bold decisions, one must be brave. One must have the courage of conviction, courage to defy conventional wisdom, and courage to take the path less travelled."*

**Integrity**

Integrity in leaders refers to being honest, trustworthy, and reliable. Leaders with integrity act in accordance with their words which essentially mean that they practice what they preach. The most glaring benefit of practicing integrity in leadership is that it builds credibility with clients, investors, and employees alike. Research on leadership has consistently rated integrity as one of the most important character traits of a successful leader. Leaders who demonstrate integrity garner trust among their colleagues. They aren't afraid of the truth, and they stand up for what they believe in.

continued on page 5

# ಅಧ್ಯಕ್ಷರ ಮಾತು



ಸದಸ್ಯ ಬಾಂಧವರೇ,

ಶಿಕ್ಷಣ ಎನ್ನುವುದು ಪ್ರತಿಯೊಬ್ಬ ಪ್ರಜೆಯ ಮೂಲಭೂತ ಹಕ್ಕು ಮತ್ತು ಜ್ಞಾನ ವೃದ್ಧಿಯ ಜೊತೆಗೆ ನೀತಿ, ಸನ್ನಡತೆ ಹಾಗೂ ಮಾನವೀಯ ಮೌಲ್ಯಗಳನ್ನು ಬೆಳೆಸುವುದೇ ಶಿಕ್ಷಣದ ಮೂಲ ಉದ್ದೇಶ. ಉತ್ತಮ ಶಿಕ್ಷಣವನ್ನು ಪಡೆದ ವ್ಯಕ್ತಿ ಆರ್ಥಿಕವಾಗಿ ಬೆಳವಣಿಗೆ ಹೊಂದಿ ತನ್ನ ಕುಟುಂಬಕ್ಕೆ ಆಧಾರವಾಗುವುದರ ಜೊತೆಗೆ ಸಾಮಾಜಿಕವಾಗಿ ಹಾಗೂ ನೈತಿಕವಾಗಿ ಉತ್ತಮ ಪ್ರಜೆಯಾಗುತ್ತಾನೆ. ಇದರಿಂದ ಸದೃಢ ರಾಷ್ಟ್ರದ ನಿರ್ಮಾಣವಾಗುತ್ತದೆ. ಪ್ರಸ್ತುತ ವಿದ್ಯಮಾನದಲ್ಲಿ ಉತ್ತಮ ಶಿಕ್ಷಣವೆನ್ನುವುದು ಎಲ್ಲಾ ಕುಟುಂಬಗಳಿಗೆ ಕೈಗೆಟಕುವುದು ಕಷ್ಟಸಾಧ್ಯವಾಗಿದೆ. ಆರ್ಥಿಕ ಸಂಕಷ್ಟದಲ್ಲಿರುವ ಯಾವುದೇ ಕುಟುಂಬಕ್ಕೆ ನೆರವಾದರೆ, ಅದು ತಾತ್ಕಾಲಿಕ ಪರಿಹಾರ ಮಾತ್ರ. ಆದರೆ, ಇಂತಹ ಕುಟುಂಬದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣ ನೀಡಲು ನಾವು ನೆರವಾದರೆ, ಇಡೀ ಕುಟುಂಬವನ್ನು ಆರ್ಥಿಕವಾಗಿ ಸ್ವಾವಲಂಬಿ ಮಾಡಲು ಸಾಧ್ಯ.

ಬೆಂಗಳೂರು ಬಂಟರ ಸಂಘ ನಿರಂತರವಾಗಿ ಉನ್ನತ ಮಟ್ಟದ ಶೈಕ್ಷಣಿಕ ಸೇವೆಯನ್ನು ನೀಡುತ್ತಾ ಬಂದಿದ್ದು, ವಿದ್ಯಾರ್ಥಿವೇತನ ಯೋಜನೆಯ ಮೂಲಕ ಗ್ರಾಮೀಣ ಹಾಗೂ ನಗರ ಭಾಗದ ಆರ್ಥಿಕವಾಗಿ ಹಿಂದುಳಿದ ವಿದಾರ್ಥಿಗಳ ವಿದ್ಯಾರ್ಜನೆಗೆ ನೆರವಾಗಿದೆ. ಕಳೆದ 30 ವರ್ಷಗಳಿಂದ ನಿರಂತರವಾಗಿ ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ ವಿದ್ಯಾಸಂಸ್ಥೆಯ ಮೂಲಕ ಸಾವಿರಾರು ಬಂಟ ವಿದ್ಯಾರ್ಥಿಗಳಿಗೆ ಕನಿಷ್ಟ ಶುಲ್ಕ ಅಥವಾ ಉಚಿತವಾಗಿ ಗುಣಮಟ್ಟದ ಶಿಕ್ಷಣ ಒದಗಿಸುವ ಮೂಲಕ ನಮ್ಮ ಸಾಮಾಜಿಕ ಬದ್ಧತೆಯನ್ನು ತೋರಿದ್ದೇವೆ. 2020 ರಲ್ಲಿ ಕೊರೋನಾ ಆರ್ಥಿಕ ಮುಗ್ಗಟ್ಟಿನ ಸಂದರ್ಭದಲ್ಲಿ ಗ್ರಾಮೀಣ ಹಾಗೂ ನಗರ ಭಾಗದ ಆರ್ಥಿಕವಾಗಿ ಹಿಂದುಳಿದ ಒಟ್ಟು 37 ವಿದ್ಯಾರ್ಥಿಗಳನ್ನು ಆಯ್ಕೆಮಾಡಿ ಉಚಿತ ಪಿಯುಸಿ ಶಿಕ್ಷಣ ಹಾಗೂ ಅಗತ್ಯವಿರುವ ವಿದ್ಯಾರ್ಥಿಗಳಿಗೆ ಉಚಿತ ವಸತಿಯನ್ನು ಕಲ್ಪಿಸಿದೆ. ಈ ಸೌಲಭ್ಯವನ್ನು  ಮುಂದುವರಿಸುವ ಸಲುವಾಗಿ ಪ್ರಸಕ್ತ ಸಾಲಿನಲ್ಲಿ 10 ನೇ ತರಗತಿಯಲ್ಲಿ ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗುವ ಬೆಂಗಳೂರು ಹಾಗೂ ರಾಜ್ಯದ ವಿವಿಧ ಭಾಗಗಳ ಗ್ರಾಮೀಣ ಹಾಗೂ ಆರ್ಥಿಕವಾಗಿ ಹಿಂದುಳಿದ ಬಂಟ ಸಮುದಾಯದ ಒಟ್ಟು 50 (ವಿಜ್ಞಾನ ವಿಭಾಗಕ್ಕೆ 30 ಹಾಗೂ ವಾಣಿಜ್ಯ ವಿಭಾಗಕ್ಕೆ 20 ವಿದ್ಯಾರ್ಥಿಗಳು) ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಬೆಂಗಳೂರು ದಕ್ಷಿಣ ತಾಲೂಕು, ತಾವರೆಕೆರೆ ಹೋಬಳಿಯ ಯಲಚಗುಪ್ಪೆ ನೂತನವಾಗಿ ಆರಂಭಗೊಂಡ ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ-2 ಸಂಸ್ಥೆಯಲ್ಲಿ ಉಚಿತ ಪಿಯುಸಿ ಶಿಕ್ಷಣ ಹಾಗೂ ವಸತಿ ಕಲ್ಪಿಸುವ **'ಸಂಕಲ್ಪ'** ಯೋಜನೆಯನ್ನು ಜಾರಿಗೆ ತರಲು ತೀರ್ಮಾನಿಸಲಾಗಿದೆ.

ಮಂಗಳೂರು, ಉಡುಪಿ, ಬ್ರಹ್ಮಾವರ, ಕುಂದಾಪುರ, ಬೈಂದೂರು, ಹೆಬ್ರಿ, ಕಾರ್ಕಳ, ಬೆಳ್ತಂಗಡಿ, ಗುರುಪುರ, ಕಾಸರಗೋಡು, ಪುತ್ತೂರು, ಸುಳ್ಯ, ಬಂಟ್ವಾಳ, ಪಡುಬಿದ್ರಿ, ಬೆಳ್ಮಣ್, ಕೊಪ್ಪ, ಶಿವಮೊಗ್ಗ, ತೀರ್ಥಹಳ್ಳಿ, ಸಾಗರ ಚಿಕ್ಕಮಗಳೂರು, ಮಡಿಕೇರಿ, ಹುಬ್ಬಳ್ಳಿ, ಬೆಳಗಾಂ ಮುಂತಾದ ಕಡೆಗಳಲ್ಲಿ ಸ್ಥಳೀಯ ಬಂಟರ ಸಂಘಗಳ ಸಹಯೋಗದೊಂದಿಗೆ ಮತ್ತು ಬೆಂಗಳೂರು ನಗರದಲ್ಲಿ ಪ್ರವೇಶ ಪರೀಕ್ಷೆಗಳನ್ನು ಏರ್ಪಡಿಸಲಾಗುವುದು. ಪರೀಕ್ಷೆಯ ನಂತರ ಪ್ರಥಮ ಹಂತದಲ್ಲಿ ಆಯ್ಕೆಯಾದ ಅಭ್ಯರ್ಥಿಗಳ ಮನೆಗೆ ಭೇಟಿ ನೀಡಿ ಕೌಟುಂಬಿಕ ಹಿನ್ನೆಲೆಯನ್ನು ಪರಿಶೀಲಿಸಿ, ನಂತರ  ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಅಂತಿಮವಾಗಿ ಮೌಖಿಕ ಸಂದರ್ಶನಕ್ಕೆ  ಆಯ್ಕೆ ಮಾಡಲಾಗುವುದು. ಕ್ರೀಡೆ ಅಥವಾ ಇನ್ಯಾವುದೇ ಕ್ಷೇತ್ರದಲ್ಲಿ ರಾಷ್ಟ್ರ/ ರಾಜ್ಯಮಟ್ಟದಲ್ಲಿ ಸಾಧನೆಗೈದ ವಿದ್ಯಾರ್ಥಿಗಳಿಗೂ ವಿಶೇಷ ಆದ್ಯತೆ ಕಲ್ಪಿಸಲಾಗುವುದು. ಅಂತಿಮವಾಗಿ ಆಯ್ಕೆಗೊಂಡ ಅಭ್ಯರ್ಥಿಗಳಿಗೆ 2 ವರ್ಷದ ಉಚಿತ ಶಿಕ್ಷಣ, ವಸತಿಯೊಂದಿಗೆ ವಿಜ್ಞಾನ ವಿಭಾಗದ ಆಸಕ್ತ ವಿದ್ಯಾರ್ಥಿಗಳಿಗೆ ಇಂಜಿನಿಯರಿಂಗ್ ಮತ್ತು ವೈದ್ಯಕೀಯ ಮೊದಲಾದ ಕೋರ್ಸ್‌ಗೆ ಅರ್ಹತೆ ಪಡೆಯಲು ಅಗತ್ಯವಿರುವ ಸಿ.ಇ.ಟಿ. ಮತ್ತು ನೀಟ್ ಪರೀಕ್ಷೆಗಳಿಗೆ ಉಚಿತ ಕೋಚಿಂಗ್ ನೀಡಲಾಗುವುದು. 2021-22 ನೇ ಸಾಲಿನಲ್ಲಿ 10ನೇ ತರಗತಿಯಲ್ಲಿ ಶಿಕ್ಷಣ ಪಡೆಯುತ್ತಿರುವ ಆರ್ಥಿಕವಾಗಿ ಹಿಂದುಳಿದ ಅಭ್ಯರ್ಥಿಗಳು ಯೋಜನೆಗೆ ಅರ್ಜಿ ಸಲ್ಲಿಸಲು ಅರ್ಹರಾಗಿದ್ದು, ಅರ್ಜಿ ನಮೂನೆಗಳು ಸಂಘದ ವೆಬ್‌ಸೈಟ್‌ನಲ್ಲಿ (www.buntsanghablr.com) ಲಭ್ಯವಿದೆ. ಅರ್ಹ ಅಭ್ಯರ್ಥಿಗಳು ಭರ್ತಿ ಮಾಡಿದ ಅರ್ಜಿಯನ್ನು ಸೂಕ್ತ ದಾಖಲೆಗಳೊಂದಿಗೆ  ಸಂಘದ ಕಛೇರಿಯಲ್ಲಿ ಖುದ್ದಾಗಿ/ ಪೋಸ್ಟ್ ಮೂಲಕ ದಿನಾಂಕ 15.04.2022 ರ ಒಳಗಾಗಿ ಸಲ್ಲಿಸಬಹುದಾಗಿದೆ. ಪ್ರವೇಶ ಪರೀಕ್ಷೆಗಳು ದಿನಾಂಕ 17.04.2022, ಭಾನುವಾರದಂದು ಮೇಲೆ ತಿಳಿಸಿದ ಸಂಘಗಳ ವ್ಯಾಪ್ತಿಯಲ್ಲಿ ಹಾಗೂ ಬೆಂಗಳೂರಿನಲ್ಲಿ ಏಕಕಾಲದಲ್ಲಿ ನಡೆಸಲಾಗುವುದು.

ಸಾಧಿಸಬೇಕೆಂಬ ಹಂಬಲ ಹಾಗೂ ಸತತ ಪ್ರಯತ್ನವೇ ಉನ್ನತ ಸಾಧನೆಗೆ ತಳಹದಿ. ಬಂಟರ ಸಂಘದ ಕನಸಿನ ಯೋಜನೆ 'ಬಂಟರ ಸಂಘ ಆರ್.ಎನ್.ಎಸ್.ವಿದ್ಯಾನಿಕೇತನ-2' ಯೋಜನೆಗೆ ಕೊರೋನಾದಿಂದ ಸ್ವಲ್ಪ ಹಿನ್ನಡೆಯಾದರೂ, ಸತತ ಪ್ರಯತ್ನದ ಫಲವಾಗಿ ನಮ್ಮ ನಿರೀಕ್ಷೆಗೂ ಮೀರಿ ಯಶಸ್ವಿಯಾಗಿ ಪೂರ್ಣಗೊಂಡಿದೆ.  ದಿನಾಂಕ 24.03.2022 ರಂದು 'ಬಂಟರ ಸಂಘ ಆರ್.ಎನ್.ಎಸ್.ವಿದ್ಯಾನಿಕೇತನ ಶಾಲಾಡಳಿತ ಮಂಡಳಿಯ ಚೇರ್‌ಮೆನ್ ಶ್ರೀ ಕೆ. ಪ್ರಕಾಶ್ ಶೆಟ್ಟಿಯವರ ಉಪಸ್ಥಿತಿಯಲ್ಲಿ ಶೈಕ್ಷಣಿಕ ಸಂಕೀರ್ಣದ ಉಸ್ತುವಾರಿ/ಹಸ್ತಾಂತರ ಪಡೆಯಲಾಯಿತು. ಯೋಜನೆ ಯಶಸ್ವಿಗೊಳ್ಳಲು ಮಾರ್ಗದರ್ಶನ ನೀಡಿದ ಯೋಜನಾ ಸಮಿತಿಯ ಚೇರ್‌ಪರ್ಸನ್ ಶ್ರೀ ಕೆ. ಪ್ರಕಾಶ್ ಶೆಟ್ಟಿಯವರಿಗೆ ಹಾಗೂ ಸುದೀರ್ಘ ಅವಧಿಯವರೆಗೆ ಶ್ರಮಿಸಿದ ಯೋಜನಾ ಸಮಿತಿಯ ಸಂಚಾಲಕರಾದ ಶ್ರೀ ಅಶೋಕ್ ಕುಮಾರ್ ಶೆಟ್ಟಿ, ಕೋಆರ್ಡಿನೇಟರ್ ಶ್ರೀ ರಮಿತ್ ಬಿ. ಶೆಟ್ಟಿಯವರಿಗೆ ಹೃತ್ಪೂರ್ವಕ ವಂದನೆಗಳು.

ವಂದನೆಗಳೊಂದಿಗೆ,

**ಆರ್. ಉಪೇಂದ್ರ ಶೆಟ್ಟಿ**
ಅಧ್ಯಕ್ಷರು

# ಗೌರವ ಕಾರ್ಯದರ್ಶಿಗಳ ವರದಿ



ಎಲ್ಲರಿಗೂ ವಂದನೆಗಳು

ಪ್ರತೀ ವರ್ಷದಂತೆ ಜನವರಿ 26ರಂದು ಆಚರಿಸಬೇಕಾಗಿದ್ದ ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ವಾರ್ಷಿಕ ಕ್ರೀಡಾ ಮತ್ತು ಸಾಂಸ್ಕೃತಿಕ ದಿನಾಚರಣೆಯನ್ನು ಕೋವಿಡ್ ಕಾರಣದಿಂದಾಗಿ ಮುಂದೂಡಲಾಗಿದ್ದು, ಈ ಕಾರ್ಯಕ್ರಮವನ್ನು ಮಾರ್ಚ್ 27ರಂದು ಸಂಜೆ 5.00 ಗಂಟೆಗೆ ಆಯೋಜಿಸಲಾಗಿದೆ. ಆಮಂತ್ರಣ ಪತ್ರಿಕೆಯು ಶೀಘ್ರದಲ್ಲಿ ತಮ್ಮ ಕೈ ಸೇರಲಿದೆ. ಸಾಂಸ್ಕೃತಿಕ ಸ್ಪರ್ಧೆಯ ಬಹುಮಾನ ವಿತರಣೆ, ಕ್ರೀಡಾ ಸಾಧನಾ ಪ್ರಶಸ್ತಿ ವಿತರಣೆ, ದತ್ತಿನಿಧಿ ಪ್ರಶಸ್ತಿ ವಿತರಣೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ಈ ಕಾರ್ಯಕ್ರಮಕ್ಕೆ ತಾವೆಲ್ಲರೂ ಬಂದು ಪ್ರತೀ ವರ್ಷದಂತೆ ಈ ವರ್ಷವೂ ಕೂಡಾ ಸಹಕಾರವನ್ನು ನೀಡಬೇಕಾಗಿ ವಿನಂತಿ. ಹಾಗೆಯೇ ವಿನೂತನವಾಗಿ ನಮ್ಮ ವೈದ್ಯಕೀಯ ವಿಭಾಗದ ವತಿಯಿಂದ ನಮ್ಮ ಶಾಲೆಯ 300 ಜನ ಸಿಬ್ಬಂದಿಗಳಿಗೆ ವೈದ್ಯಕೀಯ ತಪಾಸಣೆಯನ್ನು ನಡೆಸಲಾಯಿತು. ವೈದ್ಯಕೀಯ ವಿಭಾಗದ ಚೇರ್‌ಪರ್ಸನ್ ಡಾ. ನಿಶಾಕಾಂತ್ ಶೆಟ್ಟಿ ಮತ್ತು ಅವರ ತಂಡ ಇಡೀ ದಿನ ಶಾಲೆಯ ಆವರಣದಲ್ಲಿದ್ದು ಶಿಬಿರಕ್ಕೆ ಬೇಕಾದ ವ್ಯವಸ್ಥೆಯನ್ನು ಮಾಡುವುದರ ಮೂಲಕ ಎಲ್ಲರ ಮೆಚ್ಚುಗೆಯನ್ನು ಪಡೆದರು. ಇವರಿಗೆ ಸಂಘದ ಪರವಾಗಿ ಅಭಿನಂದನೆಗಳು.

ಮಾರ್ಚ್ 13 ರಂದು ಸಮಾಜ ಸೇವಾ ಸಮಿತಿ ಮತ್ತು ಬಂಟ್ಸ್ ಸೇವಾದಳದ ವತಿಯಿಂದ ಸಮಿತಿಯ ಚೇರ್‌ಪರ್ಸನ್ ಶ್ರೀ ಉಮೇಶ್ ಶೆಟ್ಟಿ ಎಂ.ಬಿ.ಯವರ ನೇತೃತ್ವದಲ್ಲಿ ಸೇವಾ ಚೇತನ ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದು, ತಾವೆಲ್ಲರೂ ಈ ಕಾರ್ಯಕ್ರಮದ ಸದುಪಯೋಗವನ್ನು ಪಡೆಯಬೇಕು ಎಂದು ವಿನಂತಿ. ಹಾಗೆಯೇ 2020-21ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ಕೋವಿಡ್ ಕಾರಣದಿಂದಾಗಿ ನಡೆಸಲು ಸಾಧ್ಯವಾಗಲಿಲ್ಲ ಈ ವಾರ್ಷಿಕ ಮಹಾಸಭೆಯನ್ನು ಹಾಗೂ ವಿಶೇಷ ಮಹಾಸಭೆಯನ್ನು ಮಾರ್ಚ್ 27 ರಂದು ಬೆಳಿಗ್ಗೆ 10.30ಕ್ಕೆ ನಡೆಸಲು ತೀರ್ಮಾನಿಸಲಾಗಿದೆ. ಸದಸ್ಯರುಗಳು ಈ ಸಭೆಯಲ್ಲಿ ಭಾಗವಹಿಸಿ ತಮ್ಮ ಸಲಹೆ ಸೂಚನೆಗಳನ್ನು ನೀಡಿ ಸಂಘದ ಅಭಿವೃದ್ಧಿಗೆ ಸಹಕರಿಸಬೇಕೆಂದು ವಿನಂತಿ.

ಯಕ್ಷಗಾನ ಮತ್ತು ರಂಗತರಬೇತಿ ಸಮಿತಿಯ ವತಿಯಿಂದ ದಿನಾಂಕ 05.03.2022ರಂದು ಸಂಘದ ಮಹಿಳಾ ಸದಸ್ಯರಿಂದ ಮಾರುತಿ ಪ್ರತಾಪ ಯಕ್ಷಗಾನವನ್ನು ಸಂಘದ ಆವರಣದಲ್ಲಿ ಆಯೋಜಿಸಲಾಗಿತ್ತು. ಯಕ್ಷಗಾನವನ್ನು ಆಯೋಜಿಸಿದ ಸಮಿತಿಯ ಚೇರ್‌ಪರ್ಸನ್ ಶ್ರೀ ಗುರುಪ್ರಸಾದ್ ಎನ್. ಹೆಗ್ಡೆ ಮತ್ತು ತಂಡಕ್ಕೆ ಹಾಗೂ ಯಕ್ಷಗಾನದಲ್ಲಿ ಭಾಗವಹಿಸಿದ ಮಹಿಳಾ ಕಲಾವಿದರಿಗೆ ಸಂಘದ ಪರವಾಗಿ ಅಭಿನಂದನೆಗಳು. ಇದೇ ಸಂದರ್ಭದಲ್ಲಿ ರಂಗತರಬೇತಿ ತರಗತಿಯ ಉದ್ಘಾಟನೆಯನ್ನು ನೆರವೇರಿಸಲಾಯಿತು. ಶ್ರೀ ಸದಾಶಿವ ರೈ ನೀನಾಸಂರವರ ಸಹಯೋಗದೊಂದಿಗೆ ತರಗತಿಯು ಪ್ರಾರಂಭವಾಗಲಿದೆ. ಅಭಿನಯದಲ್ಲಿ ಆಸಕ್ತಿ ಇರುವಂತವರು ಈ ತರಗತಿಯನ್ನು ಸೇರಬಹುದು.

ಬೆಂಗಳೂರಿನಲ್ಲಿ ಶಿಕ್ಷಣ ಪಡೆಯುತ್ತಿರುವ, ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಮತ್ತು ಪ್ರಶಸ್ತಿ ಸಮಿತಿಯ ಚೇರ್‌ಪರ್ಸನ್ ಶ್ರೀ ಪ್ರವೀಣ್‌ಚಂದ್ರ ಶೆಟ್ಟಿಯವರ ನೇತೃತ್ವದಲ್ಲಿ ದಿನಾಂಕ 19.02.2022ರಂದು ಅರ್ಹ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನದ ಚೆಕ್‌ನ್ನು ವಿತರಿಸಲಾಯಿತು.

ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ – II ವಿದ್ಯಾಸಂಸ್ಥೆಯಲ್ಲಿ ತರಗತಿಗಳು ಈಗಾಗಲೇ ಪ್ರಾರಂಭವಾಗಿರುವುದು ತಮಗೆಲ್ಲರಿಗೂ ತಿಳಿದಿರುವ ವಿಚಾರ. ಶಾಲೆಯ ಉದ್ಘಾಟನಾ ಸಮಾರಂಭವನ್ನು ಮೇ ಎರಡನೇ ವಾರ ಅಥವಾ ಅದಕ್ಕಿಂತಲೂ ಮುಂಚಿತವಾಗಿ ಮಾಡುವ ಸಿದ್ಧತೆಯಲ್ಲಿದ್ದೇವೆ. ಹಾಗೆಯೇ ಅಲ್ಲಿನ ಕಾಮಗಾರಿಯು ಸಂಪೂರ್ಣವಾಗಿ ಮುಗಿದಿದ್ದು ಅದರ ಹಸ್ತಾಂತರವನ್ನು ಶಾಲೆಯ ಚೇರ್‌ಮೆನ್ ಶ್ರೀ ಕೆ. ಪ್ರಕಾಶ್ ಶೆಟ್ಟಿ ಅವರ ಸಮ್ಮುಖದಲ್ಲಿ ನೀಡಲಾಯಿತು. ಯಾವುದೇ ಅಡೆ ತಡೆಗಳಿಲ್ಲದೆ ಶಾಲೆಯ ಕೆಲಸ ಸಂಪೂರ್ಣವಾಗಿ, ಆರೋಗ್ಯಕರವಾಗಿ ನಡೆದುಬಂದಿದೆ. ಅದಕ್ಕೆ ಸಹಕರಿಸಿದಂತಹ ಯೋಜನಾ ಸಮಿತಿಯ ಸಂಚಾಲಕರಾದ ಶ್ರೀ ಹೆಚ್.ಅಶೋಕ್ ಕುಮಾರ್ ಶೆಟ್ಟಿ ಹಾಗೂ ಕೋ-ಆರ್ಡಿನೇಟರ್ ಶ್ರೀ ರಮಿತ್ ಬಿ. ಶೆಟ್ಟಿಯವರಿಗೆ ಸಂಘದ ಪರವಾಗಿ ಹೃತ್ಪೂರ್ವಕ ಅಭಿನಂದನೆಗಳು.

ಸಂಘದ ಪ್ರತಿಯೊಂದು ಕಾರ್ಯಕ್ರಮಕ್ಕೂ ಸದಸ್ಯರಾದ ತಾವುಗಳು ಸಹಕಾರವನ್ನು ನೀಡುತ್ತಾ ಬಂದಿದ್ದೀರಿ. ಇನ್ನೂ ಮುಂದೆಯೂ ತಮ್ಮ ಸಹಕಾರವನ್ನು ಕೋರುತ್ತಾ ಸಂಘವನ್ನು ಮುನ್ನಡೆಸುವ ದೃಷ್ಟಿಯಿಂದ ನಾವೆಲ್ಲ ಒಂದಾಗೋಣ ಎನ್ನುವ ಆಶಯದೊಂದಿಗೆ,

**ಮಧುಕರ ಎಂ. ಶೆಟ್ಟಿ**

ಗೌರವ ಕಾರ್ಯದರ್ಶಿ

Editorial continued from page 2

*"The supreme quality for leadership is unquestionable integrity. Without it, no real success is possible."*
*– Dwight Eisenhower, Former US President*

**Effective Communicator**

*This quote by Stephen Covey is one of my favourites – "As a leader, every time you open your mouth, you create culture."*

Communication is at the core of effective leadership. If you want to influence and inspire your team, you need to practice empathy and transparency, and understand how others perceive you, through your verbal and non-verbal cues. Effective communication and effective leadership are closely intertwined. Leaders can accomplish nothing without clear, compelling, credible messages that inform, motivate and involve people.

If you're not an effective communicator with the people you are supposed to lead, none of the other leadership qualities or characteristics would matter as much. Clarity is especially important. According to the Predictive Index People Management Study, the leaders who were rated "bad" by their team members, 58% don't communicate clear expectations. This can be immensely frustrating for the team they are leading.

**Perseverance**

Perseverance can be defined as a healthy mind-set of persistence in a set of actions or tasks when faced with severe difficulties, discouragement, and obstacles. From a leadership perspective, being perseverant means that he or she is not ready to give in to the challenge and is willing to do whatever it takes to accomplish the goal.

It doesn't necessarily mean making the right decisions at all times and dealing with every problem adeptly. It also means managing the team morale and boosting team member's confidence when the chips are down. A leader lacking this quality would diminish his team's chances of achieving their goal and crumble under extreme external pressure.

*"If four things are followed - having a great aim, acquiring knowledge, hard work, and perseverance - then anything can be achieved." - A. P. J. Abdul Kalam*

**Empower Others**

Bill Gates famously and wisely said - "As we look ahead into the next century, leaders will be those who empower others."

A key part of being a modern and engaging leader is empowering your team members for future success. Empowerment means that you give your team more responsibility and autonomy, providing them with a sense of self-worth and credibility. Involving team members in the decision-making process can have a great influence on their confidence and creativity. Helping your team to feel important means they're better equipped to perform their tasks successfully. Empowerment is a great way to not only boost the performance of your team members but also your skills as a leader, ultimately contributing to the overall success of the organization.

Having taken the above mentioned attributes into consideration, it is equally important to understand the repercussions of bad leadership. Bad leaders have a negative impact on employees and the

organization's reputation. Their behaviour often include intimidation, bullying, misrepresenting facts, rejecting input from employees, retaliation, blaming others, dishonesty, deceit, and anger. These toxic behaviours prevent the formation of a positive organizational climate, prevent other leaders from meeting their requirements, and thwart the organization from accomplishing its goals. The consequences of bad leadership are far-reaching and can be devastating. Organizations should take swift and immediate action to root out toxic leaders.

To summarise, Leadership is often challenging and one size does not fit all. Instead of choosing one leadership style, effective leadership requires fluidity to help you deal with each situation or problem as it occurs.

I would like to end on a profound note by Brian Tracy, the famous Canadian motivation speaker who said -"Become the kind of leader that people would follow voluntarily; even if you had no title or position."

**M. Muralidhar Hegde**
hegdemm@gmail.com

## ಕೋಳ್ಯೂರು ರಾಮಚಂದ್ರರಾಯರಿಗೆ ಮುಳಿಯ ತಿಮ್ಮಪ್ಪಯ್ಯ ಪ್ರಶಸ್ತಿ




ಕನ್ನಡ ಸಾರಸ್ವತ ಲೋಕದ ಹಿರಿಯ ವಿದ್ವಾಂಸ ದಿವಂಗತ ಮುಳಿಯ ತಿಮ್ಮಪ್ಪಯ್ಯನವರ ನೆನಪಿನಲ್ಲಿ ನೀಡಲಾಗುವ ಮುಳಿಯ ತಿಮ್ಮಪ್ಪಯ್ಯ ಪ್ರಶಸ್ತಿಗೆ ಪ್ರಸಿದ್ಧ ಯಕ್ಷಗಾನ ಕಲಾಸಾಧಕ ಕೋಳ್ಯೂರು ರಾಮಚಂದ್ರ ರಾವ್ ಅವರು ಆಯ್ಕೆಯಾಗಿದ್ದಾರೆ.

ಬಂಟ್ವಾಳ – ಕಾಸರಗೋಡು ಗಡಿಭಾಗದ ಕರೋಪಾಡಿಯಲ್ಲಿ 1932ರಲ್ಲಿ ಜನಿಸಿದ್ದ ಇವರು ಧರ್ಮಸ್ಥಳ, ಕಟೀಲು, ಕೂಡ್ಲು, ಸುರತ್ಕಲ್, ಕದ್ರಿ, ಕರ್ನಾಟಕ, ಬಪ್ಪನಾಡು ಮೇಳಗಳಲ್ಲಿ ಅವಿಚ್ಛಿನ್ನ 7 ದಶಕಗಳ ತಿರುಗಾಟ ನಡೆಸಿದ್ದಾರೆ. ಯಕ್ಷಗಾನ ಸಾಮ್ರಾಜ್ಯದಲ್ಲಿ ಯಕ್ಷಗಾನದ ರಾಣಿಯೆಂದೇ ಇವರು ಪ್ರಖ್ಯಾತರಾಗಿದ್ದಾರೆ.

ಬೆಂಗಳೂರು ಬಂಟರ ಸಂಘದ ಸರ್ವ ಸದಸ್ಯರ ಪರವಾಗಿ ಇವರಿಗೆ ಅಭಿನಂದನೆಗಳು.

## ಶ್ರೀನಿವಾಸ ಸೂಡರ ಎರಡು ಕೃತಿಗಳ ಲೋಕಾರ್ಪಣೆ




ಮಲೆನಾಡಿನ ಪ್ರಖ್ಯಾತ ಉದ್ಯಮಿ, ರಾಷ್ಟ್ರಪ್ರಶಸ್ತಿ ವಿಜೇತ ಚಲನಚಿತ್ರ ನಿರ್ಮಾಪಕರು, ಪ್ರಗತಿಪರ ಕೃಷಿಕರು ಹಾಗೂ ಲೇಖಕರಾದ ಶ್ರೀ ಶ್ರೀನಿವಾಸ ಸೂಡರ ನಗೆಗೊಂಚಲು ಮತ್ತು ಮುತ್ತಿನ ತೆನೆ ಎಂಬ ಎರಡು ಕೃತಿಗಳು ಇತ್ತೀಚೆಗೆ ಬೆಂಗಳೂರಿನಲ್ಲಿ ಲೋಕಾರ್ಪಣೆಗೊಂಡಿತು.

ಶ್ರೀಯುತ ಶ್ರೀನಿವಾಸ ಸೂಡರು ಬೆಂಗಳೂರಿನಲ್ಲಿ ಪೂರ್ಣಿಮಾ ಫೈನಾನ್ಸ್ ಕಾರ್ಪೊರೇಷನ್ ಮತ್ತು ಪೂರ್ಣಪ್ರಜ್ಞಾ ಫಿನ್ ಕ್ಯಾಪ್ ಪ್ರೈವೇಟ್ ಲಿಮಿಟೆಡ್ ಎಂಬ ಸಂಸ್ಥೆಗಳನ್ನು ಹುಟ್ಟುಹಾಕಿ ಮಲೆನಾಡಿನ ಬಹಳಷ್ಟು ಜನರಿಗೆ ಉದ್ಯಮವನ್ನು ಕೊಟ್ಟ ಸರಳ ಸಜ್ಜನಿಕೆಯ ವ್ಯಕ್ತಿ. ಶ್ರೀಯುತರಿಗೆ ಬಾಲ್ಯದಿಂದಲೂ ಸಾಹಿತ್ಯದ ಬಗೆಗೆ ಅತೀವ ಒಲವು, ತಮ್ಮ ಜೀವನದ ಅನುಭವ ಹಾಗೂ ಕೆಲವು ನೈಜ ಹಾಸ್ಯ ಘಟನೆಗಳನ್ನು ತಮ್ಮದೇ ಆದ ಶೈಲಿಯಲ್ಲಿ ಈ ಎರಡು ಪುಸ್ತಕಗಳಲ್ಲಿ ಮನಮುಟ್ಟುವಂತೆ ನವಿರಾಗಿ ರಚಿಸಿದ್ದಾರೆ.

ಮುತ್ತಿನ ತೆನೆಯು ಜೀವನದ ಅನುಭವವನ್ನು ತೆರೆದಿಟ್ಟರೆ, ನಗೆಗೊಂಚಲು ಮನಕ್ಕೆ ತುಂಬಾ ಮುದವನ್ನು ನೀಡುವ ಒಂದು ಕೃತಿ, ಶ್ರೀಯುತರ ಕೃತಿಗೆ ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಕನ್ನಡ ಪುಸ್ತಕ ಪ್ರಾಧಿಕಾರದಿಂದ ಪ್ರಶಂಸೆ ಸಿಕ್ಕಿದೆ. ಸಾಹಿತ್ಯ ಕ್ಷೇತ್ರದಲ್ಲೂ ಸದ್ದು ಮಾಡುತ್ತಿರುವ ಶ್ರೀಯುತರಿಗೆ ಸಮಸ್ತ ಬಂಟ ಸಮುದಾಯದ ಪರವಾಗಿ ಶುಭಹಾರೈಕೆಗಳು.



## ಬಂಟರ ಸಂಘ ಬೆಂಗಳೂರು
## ಅನ್ನದಾತ ಯೋಜನೆ

**ಶ್ರೀ ಉಮೇಶ್ ಶೆಟ್ಟಿ ಎಂ. ಬಿ.ರವರು**
**ಈ ಯೋಜನೆಗೆ ರೂ. 10,000/– ಗಳ ಕೊಡುಗೆ ನೀಡಿರುತ್ತಾರೆ.**

# Handing over of Project
# Bunts' Sangha RNS Vidyaniketan-II





**"Every Accomplishment starts with a decision to try".**

The dream project of building the Bunts' Sangha RNS II Campus was completed at record speed and made to accomplish success. The handing over ceremony was organized in the Admin Block at Bunts' Sangha RNS II Campus Yelachaguppe on 23.02.2022. The ceremony took place under the Chairmanship of Sri. K Prakash Shetty, Chairman Governing Council, Sri R. Upendra Shetty, President, Bunts' Sangha Bangalore, Sri Madhukar M. Shetty, Hon. Secretary & Convenor, Bunts' Sangha Bangalore, Sri Ramith B. Shetty, Co-ordinator Project Committee, Sri. Ashok Kumar Shetty, Convenor – Project Committee.

Mr. Madhukar M Shetty, Secreatary / Convenor Bunts' Sangha, welcomed Chairman Sri Prakash Shetty, Sri R. Upendra Shetty, President Bunts' Sangha Bangalore, other member, representatives from various organizations, Principal and Staff present at the meeting.

The Project facts was presented to the dignataries by Sri Ramith B. Shetty Co-ordinator, Project Committee in detail with facts and figures. Following the project facts presentation the handing over of various work orders were done by Sri A R Vijay from M/s Urban Frame Works Pvt Ltd, Sri Shashi Kiran from TPMC and Sri. Ramesh D from Gina Constructions Pvt Ltd.

The Chairman Governing Council Sri K Prakash Shetty addressed the gathering and applauded the project committee for their prompt completion and their ability to cutdown the cost of the construction considerably in the interest of the institution. He also appreciated all the efforts put by Sri Ramith B. Shetty and Sri Ashok Shetty for their patience, perseverance and commitment towards the assigned project. He also addressed the Principal and the staff of Bunts' Sangha RNS Vidyaniketan and reiterated that the Institution should function in a systematic manner and the staff should be more dedicated and professional in their approach. He mentioned that it is all like give and take policy wherein more focus should be given to the academic ranks or results as well as cleanliness maintained in the premises. He also asked to organize a meeting including all the faculties of the institution in the near by date to discuss about how to take the organization towards new avenues.

Sri R. Upendra Shetty, President, Bunts' Sangha Banaglore appraised about the contribution of Chairman, Governing Council Sri K Prakash Shetty any his meticulous way of working in an organization.

Sri Ashok Shetty, Convenor, Project Committee addressed the gathering and thanked everyone for the support and contribution towards the accomplishment of the project.

The Principal, Sri Yesudas L, introduced all the heads who were present during the meeting.

The other matters that were discussed during the meeting were regarding issue of textbooks and notebooks for the next academic year, finalization of vendors, infrastructural requirements like extra rooms and possible measures to meet the shortage, installation of CCTV in Campus II and interior decoration for the Admin Block, lab setup and staff rooms setup. He also asked to provide the overall requirement in terms of academic and infrastructure.

**PRINCIPAL**

## ಬಂಟರ ಸಂಘ ಬೆಂಗಳೂರು – ವಿದ್ಯಾರ್ಥಿ ವೇತನ ಮತ್ತು ಪ್ರಶಸ್ತಿ ಸಮಿತಿ



ದಿನಾಂಕ 19.02.2022ರಂದು ಸಂಘದ ವಿದ್ಯಾರ್ಥಿವೇತನ ಮತ್ತು ಪ್ರಶಸ್ತಿ ಸಮಿತಿಯ ವತಿಯಿಂದ ಅರ್ಹ ವಿದ್ಯಾರ್ಥಿಗಳಿಗೆ ವಿದ್ಯಾದೀವಿಗೆಯ ಚೆಕ್‌ನ್ನು ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಸಂಘದ ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು ಭಾಗವಹಿಸಿದ್ದರು.

**ಉದಯ್ ಶೆಟ್ಟಿ**
ಸಂಚಾಲಕರು

**ಪ್ರವೀಣ್‌ಚಂದ್ರ ಶೆಟ್ಟಿ**
ಚೇರ್‌ಪರ್ಸನ್

ವಿದ್ಯಾರ್ಥಿ ವೇತನ ಮತ್ತು ಪ್ರಶಸ್ತಿ ಸಮಿತಿ

# Health Check-up Camp organised by Doctors Wing

Health check-up camp for the teaching and non – teaching staff of Bunts' Sangha RNS Vidyaniketan.

**Health is a state of complete harmony of the body, mind and spirit. A good health is the realization that everything we do, think, feel and believe has an effect on our state of well – being.**

Seeking well-being for all as one of its philanthropic missions, The Bunts' Sangha Bangalore in collaboration with the benevolent Doctors' Wing of The Bunts' Sangha, Bangalore has attained yet another milestone in its ever-dedicated service to the society by organising a mammoth 'Health Check- up Camp' for all the teaching and non-teaching staff of the Bunts' Sangha RNS Vidyaniketan, Bengaluru. The camp, a generous stride, was a complete 'Free Health Camp'. Dr. Nishikanth Shetty was Like a beacon of light taking full responsibility and having the birds eye view of the entire event so that it is organised in a very professional manner. Special Appreciation to Dr. Vibha Shetty, the ever enthusiastic, supportive convenor of the Bunts' Sangha Doctor Cell who meticulously co-ordinated with all the doctors who are specialized in their respective fields.

The Two-Days Camp organised on 25th and 26th February, 2022 was a grand success. The first day comprised of the collection and testing of blood samples of all the staff by Isha Diagnostics, Department of Histopathology & Cytology, Bengaluru under the guidance and supervision of Dr. N. Kishore Alva (M.B.B.S, M.D {Pathology}). The test parameters comprised of Complete Blood Count (CBC), Differential Count, fasting blood sugar, Lipid Profile and Hormone Assays (Thyroid Stimulating Hormone).

The following day, that is 26th February, 2022, was etched in the history of Bunts' Sangha RNS Vidyaniketan, Bengaluru as a memorable day as a galaxy of medical fraternities proficient in their respective medical fields, graced the occasion during the formal inauguration of the Health Check-up Camp along with the ever-enthusiastic team of the Sangha President, Shri Upendra Shetty, the Honorary Secretary, Shri Madhukar M Shetty, The Treasurer, Shri Deepak Shetty, the Members of the Bunts' Sangha Bengaluru and the entire staff of the Bunts' Sangha RNS Vidyaniketan, Bengaluru.

The Campus of Bunts' sangha RNS Vidyaniketan, Bengaluru resembled a view of a Hitech diagnostic centre as it was graced by the esteemed medical fraternities of Bengaluru who with an impeccable zest and enthusiasm rendered their services to all the staff members of the institution.

The team of revered doctors, with an unparalleled proficiency, rendered their benevolent services in making this day as a memorable one. The plethora of Doctors comprised of Dr. Nanda Kishore Alva, H.O.D of Dept. of Pathology M. S Ramaiah Medical College, Dr. Ananth Bhandary, H.O.D. Dept. of Ophthalmology, M. S Ramaiah Medical College, Dr. Mamatha Shetty, Chief Gynaecologist, Cloud Nine Hospital, Dr. Sanjana Rai, Physician, Vydehi Hospital, Dr. Hemanth Kumar, Orthopaedics, Dr. Satvik Shetty, Neurosurgeon, Manipal Hospital, Dr. Ashish, Dermatologist, Dr. Pooja Rai, Psychiatrist and Mr Veeresh Representive from Altius Hospital for providing the facility of free ECG to all the staff members. The Paramount team of intern doctors from MS Ramaiah hospital Dept of Opthomology were assisted by a team of dedicated nurses from Spine Care and other medical assistants.

The accomplished and prolific doctors provided ample, in-depth consultation on every aspect of the Blood test and vital test reports of every staff member of the institution and also addressed to all their queries with the same keenness and buoyancy right from the start of the day till late evening.

The esteemed doctors have, as a resolution, dedicated in furthering their selflessness service by devoting themselves in donating the necessary medicines essential for the nourishment of those staff members of the institution who are found anaemic. As a mission of attainment of a Healthy and energetic staff of the institution, the renowned doctors have also assured in organising seminars on creating awareness of deficiency of Haemoglobin and risks of Cervical Cancer.

The Two-day Health Check up Camp of the teaching and non-teaching staff of the Bunts' Sangha RNS Vidyaniketan, Bengaluru earmarks in the history of Bunts' Sangha, Bengaluru as a unique and commendable initiative by any organisation in the field of education. It is a day cherished forever by all.

**As said by Bryant McGill,**

**Health is a priceless wealth. Invest while you can.**

**We cannot enjoy this wealth if we are not in good health.**

**Hence, investment in HEALTH is the best investment.**

**Dr. Vibha Shetty**
Convenor - Doctors Wing

**Dr. Nishakanth Shetty**
Chairperson - Doctors Wing


## ಬಂಟರ ಸಂಘ ಬೆಂಗಳೂರು
## BUNTS' SANGHA BANGALORE
## 'ಸಂಕಲ್ಪ'

**ಆರ್ಥಿಕವಾಗಿ ಹಿಂದುಳಿದ ಪ್ರತಿಭಾನ್ವಿತ ಬಂಟ ವಿದ್ಯಾರ್ಥಿಗಳು ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ–II ಸಂಸ್ಥೆಯಲ್ಲಿ ಉಚಿತ ಪಿಯುಸಿ ಶಿಕ್ಷಣ (ಸೈನ್ಸ್ ಮತ್ತು ಕಾಮರ್ಸ್) ಹಾಗೂ ವಸತಿ ಸೌಲಭ್ಯ ಪಡೆಯಲು ಸುವರ್ಣಾವಕಾಶ**

**ಅರ್ಜಿ ಸಲ್ಲಿಸಲು ನಿಯಮ/ ಮಾನದಂಡಗಳು**

- ಬೆಂಗಳೂರು ನಗರ, ಕರಾವಳಿ ಹಾಗೂ ರಾಜ್ಯದ ವಿವಿಧ ಭಾಗದ ಶಾಲೆಗಳಲ್ಲಿ 2021–22 ನೇ ಸಾಲಿನಲ್ಲಿ 10ನೇ ತರಗತಿ ಶಿಕ್ಷಣ ಪೂರೈಸುವ ಆರ್ಥಿಕವಾಗಿ ಹಿಂದುಳಿದ ಪ್ರತಿಭಾವಂತ ಅಭ್ಯರ್ಥಿಗಳು (ಸಂಘದ ಸದಸ್ಯರು ಹಾಗೂ ಸದಸ್ಯೇತರರು) ಅರ್ಜಿ ಸಲ್ಲಿಸಬಹುದಾಗಿದೆ.
- ಕ್ರೀಡೆ, ಕಲೆ ಅಥವಾ ಇನ್ಯಾವುದೇ ಕ್ಷೇತ್ರಗಳಲ್ಲಿ ರಾಜ್ಯ/ರಾಷ್ಟ್ರಮಟ್ಟದಲ್ಲಿ ವಿಶೇಷ ಸಾಧನೆಗೈದ ಅಭ್ಯರ್ಥಿಗಳಿಗೆ ಪ್ರಾಶಸ್ತ್ಯ.
- ಸ್ಥಳೀಯ ಸಂಘಗಳ ಸಹಯೋಗದೊಂದಿಗೆ ರಾಜ್ಯದ ವಿವಿಧ ಭಾಗಗಳಲ್ಲಿ ನಡೆಸುವ ಪ್ರವೇಶ ಪರೀಕ್ಷೆಯಲ್ಲಿ ಪ್ರಥಮ ಹಂತದಲ್ಲಿ ಆಯ್ಕೆಗೊಂಡ ಅಭ್ಯರ್ಥಿಗಳ ಮನೆಗೆ ಭೇಟಿ ನೀಡಿ ಅವರ ಕೌಟುಂಬಿಕ ಹಿನ್ನೆಲೆಯನ್ನು ಪರಿಶೀಲಿಸಿ, ನಂತರ ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಅಂತಿಮವಾಗಿ ಮೌಖಿಕ ಸಂದರ್ಶನಕ್ಕೆ ಆಯ್ಕೆ ಮಾಡಲಾಗುವುದು.
- ಅಂತಿಮವಾಗಿ ಆಯ್ಕೆಯಾದ ಅಭ್ಯರ್ಥಿಗಳಿಗೆ ಬಂಟರ ಸಂಘ ಆರ್.ಎನ್.ಎಸ್.ವಿದ್ಯಾನಿಕೇತನ–II ಸಂಸ್ಥೆಯಲ್ಲಿ (ಯಲಚಗುಪ್ಪೆ ಗ್ರಾಮ, ತಾವರೆಕೆರೆ ಹೋಬಳಿ, ಬೆಂಗಳೂರು ದಕ್ಷಿಣ ತಾಲೂಕು) ಉಚಿತ ಪಿಯುಸಿ ಶಿಕ್ಷಣ (ಸೈನ್ಸ್ ಮತ್ತು ಕಾಮರ್ಸ್) ಹಾಗೂ ವಸತಿ ಸೌಲಭ್ಯ ಕಲ್ಪಿಸಲಾಗುವುದು. (ಅರ್ಹ ಸೈನ್ಸ್ ವಿದ್ಯಾರ್ಥಿಗಳಿಗೆ ಸಿ.ಇ.ಟಿ. ಮತ್ತು ನೀಟ್ ಪರೀಕ್ಷೆಗಳಿಗೆ ಉಚಿತ ಕೋಚಿಂಗ್ ಲಭ್ಯವಿದೆ).
- ಅರ್ಜಿಗಳು ಸಂಘದ ವೆಬ್‌ಸೈಟ್‌ನಲ್ಲಿ ಲಭ್ಯವಿದ್ದು, ಹೆಚ್ಚಿನ ವಿವರಗಳನ್ನು ಈ ಸಂಚಿಕೆಯ 'ಅಧ್ಯಕ್ಷರ ನುಡಿ'ಯಲ್ಲಿ ಪ್ರಕಟಿಸಲಾಗಿದೆ. ಭರ್ತಿ ಮಾಡಿದ ಅರ್ಜಿಗಳನ್ನು ಸೂಕ್ತ ದಾಖಲೆಗಳೊಂದಿಗೆ ಸಲ್ಲಿಸಲು ಕೊನೆಯ ದಿನಾಂಕ 15.04.2022.

**ಮಧುಕರ ಎಂ. ಶೆಟ್ಟಿ**
ಗೌರವ ಕಾರ್ಯದರ್ಶಿ

**ಆರ್. ಉಪೇಂದ್ರ ಶೆಟ್ಟಿ**
ಅಧ್ಯಕ್ಷರು

**ಪದಾಧಿಕಾರಿಗಳು ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರು**

**Email: buntsanghabangalore@yahoo.in / Website: www.buntsanghablr.com**
**Tel: 080-23399635 / 23399636 / 23399323 / 7022119739 / 6363514510**

# ಉದಯೋನ್ಮುಖ ಬಂಟ ಪ್ರತಿಭೆಗಳು
# EMERGENT BUNT TALENT



**Shamitha S Shetty**

Shamitha S Shetty, D/o. Mr. Sukesh Shetty and Mrs. Sheela S Shetty, Bangalore has participated in 33rd Junior National Netball Championship held in Telangana, organised by the Ministry of Youth Affairs and Sports, Government of India. Bangalore Bunts Sangha Congratulates and wishes her all the best.

ಕರಾವಳಿ ಕಾವಲು ಪೊಲೀಸ್ ಮಲ್ಪೆ ಕೇಂದ್ರ ಕಚೇರಿಯಲ್ಲಿ ಪೊಲೀಸ್ ಹೆಡ್ ಕಾನ್‌ಸ್ಟೇಬಲ್ ಆಗಿ ಕರ್ತವ್ಯ ನಿರ್ವಹಿಸುತ್ತಿರುವ ಶ್ರೀ ಸಂತೋಷ್ ಶೆಟ್ಟಿ ಅವರಿಗೆ ಮೈಸೂರಿನ ಪ್ರತಿಷ್ಠಿತ ಕರ್ನಾಟಕ ಮುಕ್ತ ವಿಶ್ವ ವಿದ್ಯಾಲಯ ಪಿ.ಹೆಚ್.ಡಿ. ಪದವಿಯನ್ನು ನೀಡಿದೆ.

ಇವರು ಕರ್ನಾಟಕ ಮುಕ್ತ ವಿವಿಯ ಪ್ರೊಫೆಸರ್ ಡಾ. ಮಹಾದೇವಿ ಅವರ ಮಾರ್ಗದರ್ಶನದಲ್ಲಿ ಮಂಡಿಸಿದ “ಮೈಸೂರು ಒಡೆಯರ ಕಾಲದಲ್ಲಿ ಪೊಲೀಸ್ ವ್ಯವಸ್ಥೆ – ಒಂದು ಅಧ್ಯಯನ” ವಿಷಯದ ಕುರಿತ ಮಹಾ ಪ್ರಬಂಧಕ್ಕೆ ಪಿ.ಹೆಚ್.ಡಿ. ಪದವಿಯನ್ನು ನೀಡಲಾಗಿದೆ.

ಇವರು ಬ್ರಹ್ಮಾವರ ಸಾಲಿಕೇರಿಯ ರಾಜೀವಿ ಶೆಡ್ತಿಯವರ ಪುತ್ರ ಮತ್ತು ಹಾರಾಡಿ ವಿದ್ಯಾಮಂದಿರ ಶಾಲೆಯ ಹಳೆ ವಿದ್ಯಾರ್ಥಿಯಾಗಿರುತ್ತಾರೆ. ಬೆಂಗಳೂರು ಬಂಟರ ಸಂಘದ ಸರ್ವ ಸದಸ್ಯರ ಪರವಾಗಿ ಇವರಿಗೆ ಅಭಿನಂದನೆಗಳು.



**ಶ್ರೀ ಸಂತೋಷ್ ಶೆಟ್ಟಿ**



**ಕು। ಚಾರ್ವಿ ಎಮ್. ಭಂಡಾರಿ**

5 ವರ್ಷ 10 ತಿಂಗಳು ಪ್ರಾಯದ ಕು। ಚಾರ್ವಿ ಎಮ್. ಭಂಡಾರಿ ಮಾಡೆಲಿಂಗ್ ಕ್ಷೇತ್ರದಲ್ಲಿ ಸಕ್ರಿಯವಾಗಿದ್ದು, “ಇಂಡಿಯಾ ಕಿಡ್ಸ್ ಫ್ಯಾಶನ್ ವೀಕ್”ನ ಸೀಸನ್ 8–2021ರಲ್ಲಿ ಭಾಗವಹಿಸಿ ಪ್ರಶಸ್ತಿ ಪತ್ರ ಪಡೆದುಕೊಂಡಿದ್ದಾಳೆ. ಕು। ಚಾರ್ವಿ ಈ ಹಿಂದೆ ಕೂಡಾ ಹಲವಾರು ಪ್ರಶಸ್ತಿಗಳನ್ನು ಇದೇ ಕ್ಷೇತ್ರದಲ್ಲಿ ಪಡೆದಿದ್ದಾಳೆ. ತ್ರಾನಾ ಫೌಂಡೇಷನ್, ವಿಶ್ವಹಿಂದೂ ಪರಿಷತ್ ನಡೆಸಿದ ಸ್ಪರ್ಧೆಗಳಲ್ಲಿ ಇವಳು ಭಾಗವಹಿಸಿದ್ದಾಳೆ. ಬೆಂಗಳೂರು ಬಂಟರ ಸಂಘದ ಪರವಾಗಿ ಈ ಪುಟ್ಟ ಪ್ರತಿಭೆಗೆ ಅಭಿನಂದನೆಗಳು.



Ms. Sunidhi Chandrakanth Shetty has been awarded with an Academic Degree "Doctor rerun naturalium (Dr.rer.nat.)" by the faculty of Science of the University of postdam. She proved her competence in the scientific discipline "Molekulare Biotechnologie", with the thesis entitled "Directed chemical communication in artificial eukaryotic cells" and a public examination (defense). Bunts Sangha Bangalore congratulates and wishes her all the best.

**Sunidhi Chandrakanth Shetty**

Mr Abhinand Shetty and his wife Sangeetha Mari (S/o Late M.S. Shetty and Vijayalakshmi Shetty) were selected to represent India in the World Senior championships held in Huelva, Spain between the 28th November 2021 and 4th December 2021.

Abhinand and Sangeetha represented India in the Mixed Doubles 35+ category, 40+ Mens doubles category and the 35+ Women's Doubles category. They have won the bronze medal in all the categories mentioned above. Bunts Sangha Bangalore congratulates and wishes the couple all the best.




**Mr. Abhinand Shetty & Sangeetha Mari**



**ಕಡಮಜಲು ಸುಭಾಸ್ .ರೈ**

ಫೆ.10, 2022 ರಂದು ಜರುಗಿದ ಒಡಿಯೂರು ಸ್ವಾಮೀಜಿಯವರ ಜನ್ಮ ಷಷ್ಠ್ಯಬ್ದ ಸಮಾರೋಪ ಸಮಾರಂಭದಲ್ಲಿ ದ.ಕ.ಜಿಲ್ಲಾ ಕನ್ನಡ ರಾಜ್ಯೋತ್ಸವ–2021 ಪ್ರಶಸ್ತಿ ಪುರಸ್ಕೃತ ಕಡಮಜಲು ಸುಭಾಸ್ .ರೈ ಯವರಿಗೆ "ಒಡಿಯೂರು ಶ್ರೀ ಪ್ರಶಸ್ತಿ" ಲಭಿಸಿದೆ. ಕಡಮಜಲು ಸುಭಾಸ್ ರೈಯವರು ಬಂಟರ ಯಾನೆ ನಾಡವರ ಮಾತೃ ಸಂಘ(ರಿ). ಮಂಗಳೂರು ಇವರಿಂದ ಕಾಪು ಮುದ್ದಣ್ಣ ಶೆಟ್ಟಿ ಸ್ಮಾರಕ ಚಿನ್ನದ ಪದಕ, ಕರ್ನಾಟಕ ಸರಕಾರದ ಅರಣ್ಯ ಮಿತ್ರ ಪ್ರಶಸ್ತಿ ಮುಂತಾದ ಹಲವಾರು ಪ್ರಶಸ್ತಿ, ಸನ್ಮಾನಗಳನ್ನು ಸಮಗ್ರ ಕೃಷಿ ಸಾಧನೆಗಾಗಿ ಪಡೆದಿರುತ್ತಾರೆ. ಇವರ ಮಕ್ಕಳಾದ ವಿಪುಲ್ ಎಸ್. ರೈ ಮತ್ತು ವಿಂಧ್ಯಾ ದುರ್ಗಾಪ್ರಸಾದ್‌ರವರು ಬೆಂಗಳೂರು ಬಂಟರ ಸಂಘದ ಸದಸ್ಯರಾಗಿರುತ್ತಾರೆ. ಬೆಂಗಳೂರು ಬಂಟರ ಸಂಘದ ಸರ್ವ ಸದಸ್ಯರ ಪರವಾಗಿ ಇವರಿಗೆ ಅಭಿನಂದನೆಗಳು.



**Amulya V. Rai**

Amulya V. Rai, graduated from Government Dental College and Research Institute, Bangalore and post graduate from SDM College of Dental Sciences and Hospital, Dharawad with Distinction in the Department of Conservative Dentistry and Endodontics.

She has received best postgraduate student award from International Dental Excellence Awards, Heroes of Dentistry, 2021. Also she was nominated by the Famdent awards 2021. She has conducted 7 original research which were published in the indexed national and international journals. Received best paper presentation award for the original research study at IACDE National PG convention 2019 held at Chandigarh.

She has contributed a chapter named Artificial Intelligence to the book, Advanced trends in Dental Sciences. Dr. Amulya V. Rai is daughter of Sri P. Vittal Rai and Smt. Sumithra V. Rai, members of Bunts Sangha Bangalore. Bunts Sangha Bangalore congratulates and wishes her all the best.

Prapthi P Shetty, Daughter of Mr. Parag P. Shetty and Dr. Shruthi P. Shetty has won Silver Medal in the recently held 47th Junior National Aquatic Championship 2021 at Bangalore. She represented Karnataka in Water polo. She is Grand Daughter of Smt. Shubha R. Rai and Late Sri B.V. Ramanath Rai & Smt. Vathsala P. Shetty and Late Sri Prabhakar G. Shetty. Bangalore Bunts Sangha Congratulates and wishes for all the best.



**Prapthi P Shetty**



**ಡಾ। ಮಾಲತಿ ಶೆಟ್ಟಿ ಮಾಣೂರು**

ಅಮೃತ ಪ್ರಕಾಶ ಪತ್ರಿಕೆಯ ವ್ಯವಸ್ಥಾಪಕ ಸಂಪಾದಕಿ, ಸಾಹಿತಿ, ಸಮಾಜ ಸೇವಕಿ ಡಾ। ಮಾಲತಿ ಶೆಟ್ಟಿ ಮಾಣೂರುರವರಿಗೆ ಬೆಂಗಳೂರಿನ ಜನತಾ ಸಮಾಜ ಸೇವಾ ಟ್ರಸ್ಟ್ (ರಿ) ನೀಡುವ ಡಾ। ಶಿವಕುಮಾರ ಮಹಾಸ್ವಾಮಿಜಿಯವರ ಪುಣ್ಯ ಸ್ಮರಣಾರ್ಥ ಕಾರ್ಯಕ್ರಮದ ಅಂಗವಾಗಿ ನೀಡುವ "ಸಿದ್ಧಗಂಗಾ ಶ್ರೀ ಸದ್ಭಾವನಾ ರಾಷ್ಟ್ರೀಯ ಪ್ರಶಸ್ತಿ" ಪತ್ರಿಕೋದ್ಯಮ ಕ್ಷೇತ್ರದ ಸಾಧನೆಗಾಗಿ ಲಭಿಸಿದೆ. ಕಳೆದ ಫೆಬ್ರವರಿ 13 ರಂದು ಬೆಂಗಳೂರಿನಲ್ಲಿ ಪ್ರಶಸ್ತಿ ಪ್ರಧಾನ ಮಾಡಲಾಯಿತು. ಬೆಂಗಳೂರು ಬಂಟರ ಸಂಘದ ಸರ್ವ ಸದಸ್ಯರ ಪರವಾಗಿ ಇವರಿಗೆ ಅಭಿನಂದನೆಗಳು.




ನಿತಾಯ್ ಕೃಷ್ಣ ಡಿ. ಮೇಂಡ

ಇಸ್ಕಾನ್, ಸೌತ್ ಬೆಂಗಳೂರುರವರು ಜನವರಿ ತಿಂಗಳಲ್ಲಿ ನಡೆಸಿದ ಭಗವದ್ಗೀತೆ ಕ್ವಿಝ್ ಸ್ಪರ್ಧೆಯಲ್ಲಿ ಕೇಂದ್ರೀಯ ವಿದ್ಯಾಲಯ ಡಿ.ಆರ್.ಡಿ.ಓ. ಇಲ್ಲಿಯ ವಿದ್ಯಾರ್ಥಿ ನಿತಾಯ್ ಕೃಷ್ಣ ಡಿ. ಮೇಂಡರವರು ದ್ವಿತೀಯ ಬಹುಮಾನ ಪಡೆದಿರುತ್ತಾರೆ. ಇವರು ಶ್ರೀ ದುರ್ಗಾಪ್ರಸಾದ್ ಎಂ. ಮತ್ತು ವಿಂದ್ಯಾ ದುರ್ಗಾಪ್ರಸಾದ್‌ರವರ ಸುಪುತ್ರ. ಯಕ್ಷಗಾನ ತರಬೇತು ಪಡೆದು ಅನೇಕ ಪ್ರಮುಖ ಪಾತ್ರಗಳನ್ನು ನಿರ್ವಹಿಸಿದ್ದಾನೆ. ಕರಾಟೆಯಲ್ಲಿಯೂ ತರಬೇತಿ ಪಡೆದು ತನ್ನ 9ನೇ ವಯಸ್ಸಿನಲ್ಲಿ "ಬ್ಲಾಕ್ ಬೆಲ್ಟ್" ಪದವಿ, 2020ರಲ್ಲಿ 2nd Ban ಬ್ಲಾಕ್ ಬೆಲ್ಟ್ ಪದವಿ ಪಡೆದಿದ್ದಾರೆ.

ಕರಾಟೆ ಸ್ಪರ್ಧೆಯಲ್ಲಿ "ರಾಷ್ಟ್ರಸಿರಿ ಟ್ಯಾಲೆಂಟ್ ಆವಾರ್ಡ್, ಭಾರತೀಯ ಅವಾರ್ಡ್, ಕರ್ನಾಟಕ ಸಿರಿ ಇತ್ಯಾದಿ 25ಕ್ಕೂ ಹೆಚ್ಚಿನ ಬಹುಮಾನಗಳು, ಬಂಟರ ಸಂಘ ಬೆಂಗಳೂರಿನಿಂದ ಕ್ರೀಡಾ ಪ್ರಶಸ್ತಿ, ಸಂಸ್ಕೃತ ಭಾರತಿ, ಕರ್ನಾಟಕ ನಡೆಸುವ ಸಂಸ್ಕೃತ ಪರೀಕ್ಷೆಯ ಎಲ್ಲಾ 4 ಹಂತಗಳಲ್ಲಿ ಅತ್ಯುತ್ತಮ ಶ್ರೇಣಿಯಲ್ಲಿ ತೇರ್ಗಡೆ, ಶೈಕ್ಷಣಿಕವಾಗಿಯೂ ಅತ್ಯುತ್ತಮವಾಗಿದ್ದು, ಇತರ ಚಟುವಟಿಕೆಗಳಾದ ಭಜನೆ, ಹಾಡು, ಸ್ಕೇಟಿಂಗ್, ಬ್ಯಾಡ್ಮಿಂಟನ್, ಪಿಯಾನೋ, ಡ್ರಾಯಿಂಗ್, ಕೊಳಲುವಾದನ ಮೊದಲಾದವುಗಳಲ್ಲಿ ಅಭ್ಯಾಸ ಮಾಡುತ್ತಿದ್ದಾರೆ. ಬೆಂಗಳೂರು ಬಂಟರ ಸಂಘದ ಸರ್ವ ಸದಸ್ಯರ ಪರವಾಗಿ ಇವರಿಗೆ ಅಭಿನಂದನೆಗಳು.

---

Mr. Avinash Kumar V. Shetty is a trained Karate master. He has participated in many events and competitions and won many awards and prizes. He is son of Sri Vishwanatha Shetty, Retd. Superintendent of police and Shashikala Shetty.



**Avinash Kumar V. Shetty**

**Achievements:**

- 1st Open Invitational National Level Karate Championship-2022 - 2 Gold Medals (KATA - Gold, Kumite - Gold)
- . 3rd Kannada Rajyothsava Cup –Bangalore-National Level Karate Championship-2021 (1 Gold - Kumite, 1 Silver – KATA)
- Malnad Open National Level Karate Championship-2021 (1 Silver - Kumite, 1 Bronze -KATA)
- Malnad Open National Level Karate Championship-2022 (1 Bronze - KATA Category
- Selected for International Karate Championship – Aug 2022 at Shimoga

# ಬಂಟರ ಸಂಘ ಬೆಂಗಳೂರು
# BUNTS' SANGHA BANGALORE

## ರಾಧಾಬಾಯಿ ತಿಮ್ಮಪ್ಪ ಭಂಡಾರಿ
## ಸ್ಮಾರಕ ಕ್ರೀಡಾ ಮತ್ತು ಸಾಂಸ್ಕೃತಿಕ ದಿನಾಚರಣೆ

ದಿನಾಂಕ: 27.03.2022, ಸಮಯ: ಸಂಜೆ 4.30ರಿಂದ
ಸ್ಥಳ: ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸಭಾಭವನ

**ಕಾರ್ಯಕ್ರಮಗಳು:**

- ಸಾಂಸ್ಕೃತಿಕ ಸ್ಪರ್ಧೆಗಳ ವಿಜೇತರಿಗೆ ಬಹುಮಾನ ವಿತರಣೆ
- ದತ್ತಿನಿಧಿ ಪ್ರಶಸ್ತಿ ವಿತರಣೆ
- ಕ್ರೀಡಾ ಸಾಧನಾ ಪ್ರಶಸ್ತಿ ವಿತರಣೆ
- ವಿಶಿಷ್ಠ ಸಾಂಸ್ಕೃತಿಕ ಕಾರ್ಯಕ್ರಮಗಳು
  ಮಜಾ ಭಾರತ ಖ್ಯಾತಿಯ ಕಲಾವಿದರಿಂದ ಹಾಸ್ಯ ನೃತ್ಯ
  ಮನೋರಂಜನೆ ಸಂಗಮ

**ತಮಗೆಲ್ಲರಿಗೂ ಆದರದ ಸ್ವಾಗತ**

ಮಧುಕರ ಎಂ. ಶೆಟ್ಟಿ
ಗೌರವ ಕಾರ್ಯದರ್ಶಿ

ಶ್ರೀ ಆರ್. ಉಪೇಂದ್ರ ಶೆಟ್ಟಿ
ಅಧ್ಯಕ್ಷರು

ರಾಧಾಕೃಷ್ಣ ಶೆಟ್ಟಿ
ಚೇರ್‌ಪರ್ಸನ್,
ಕ್ರೀಡಾ ಸಮಿತಿ

ವಿಜಯ್ ಜೆ. ಶೆಟ್ಟಿ ಹಾಲಾಡಿ
ಚೇರ್‌ಪರ್ಸನ್,
ಸಾಂಸ್ಕೃತಿಕ ಸಮಿತಿ

ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು ಮತ್ತು ಸರ್ವ ಸದಸ್ಯರು




**Wishing you all a**

## Happy New Year & Makara Sankranthi

I, K. Rathnakar Shetty active member of Bunts Sangha contributing whole heartedly for the development of the Society from 2 ½ decades and made many contributions for the implementation of Community projects.

Twice I was elected for Bunts Sangha Executive Committee, during this period supplied needy equipment, looked after renovation work, cleanliness of the temple and granite laying work at Sri Varasiddhi Vinayaka Swamy Temple, the main deity of our Association. During the 1st term of my membership in executive committee I was elected as the Chairman for Sri Varasiddhi Vinayaka Swamy Mandir. In this period purchased essential equipment such as Diyas, Storage cupbords, CC TV connection and installed in the Mandir. And also with great honour presented golden sattige and golden lotus to lord Sri Varasiddhi Vinayaka Swamy on 14.04.2017.

Later on Silver covering for Lord Sri Vinayaka Swamy, Silver Arch (Prabhavali), Panipeetha, Silver covering for Mooshika vahana were presented and decorated with the same. In the presence of divine Swamiji Sri Sri Sri Vishveshwara Theertha of Pejavara Mutt silver paani peetha were offered on 14.04.2018. During the same period in collaboration with Metro Organization Granite stones were laid in the temple premises. Small garden has been built and large number of permanent priests were appointed. For all these projects required funds were collected from donors, devotees & well wishers. I performed a lead role in all these project implementations. I'm very familiar with the devotee visitors in the Mandir.

With huge experience in religious filed, I have done all these things with diligence, devotion, commitment and conscience.

As a defeated treasurer candidate in the last election, I would like to participate for the position of Treasurer in the upcoming Management Committee Election. I have immense to serve our society and requesting your support and blessings.

Yours sincerely,

**K. Rathnakar Shetty**

Ex-Chairperson-Prarthana Mandira Samithi

Bunts Sangha Bangalore

Mob: 9945712505

ADVT.



# G M GLOBAL SCHOOL

*Innovate...Create...Inspire...!!!*

## CREATING GLOBAL LEADERS OF THE 21ST CENTURY

**G M Global School is an international campus spread over 6 acres shaped keeping in mind the National Education Policy (2020). Strengthened with an excellent teaching faculty, we mould global citizens of tomorrow. With multiple options for boarding and a state-of-the-art cafeteria, we ensure students can discover their true potential.**



Technologically Driven Classrooms



Air Conditioned Hostel Rooms



Ambient Learning Atmosphere



Prakashchandra Shetty
Chairman



Pranav Shetty
Principal

## SALIENT FEATURES

* Fully residential CBSE School
*Specially designed for students from Grade 5 onwards
*Airconditioned classrooms and hostel rooms
*Curriculum developed as per NEP 2020
*State of the art laboratories to aid practical learning
*Cafeteria with both Veg and Non-Veg food options
*2.5-acre playground equipped for track and field events
*Specially designed curriculum for sports
*Swimming pools for competitions and leisure
*On campus teachers for mentor-based learning
*Introduction of Coding and Aeronautical Science as subjects

## ADMISSIONS OPEN

Address: G M Global Village, Post Box No.12, Brahmavar, Udupi, Karnataka - 576213
CONTACT US: Mob : +91 8147041222, 8147081222 | Email : gmglobalschool@gmail.com | Website : www.gmglobalschool.com

ADVT.

# ಬಂಟರ ಸಂಘ ಬೆಂಗಳೂರು

## ಚುನಾವಣೆ : 2022-24



ಸಮುದಾಯ ಬಾಂಧವರೇ

ವೃತ್ತಿ ಜೀವನದಲ್ಲಿ ಸಾಧನೆಯ ಸಾರ್ಥಕ್ಯ ಕಂಡು, ಇದೀಗ ಸಮುದಾಯ ಸೇವೆಯ ಮೂಲಕ ಸಮಾಜ ಸೇವೆಯ ಸೇವಾಕಾಂಕ್ಷಿಯಾಗಿದ್ದೇನೆ.

ಮುಂಬರುವ ಬೆಂಗಳೂರು ಬಂಟರ ಸಂಘದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನದ ಸೇವಾಕಾಂಕ್ಷಿಯಾಗಿ ಬಂಟರ ಸಂಘದ ಮೂಲಕ ಸಮುದಾಯ ಸೇವೆಗೆ ಅವಕಾಶ ಮಾಡಿಕೊಡಬೇಕಾಗಿ ಸವಿನಯದ ಭಿನ್ನಹ.

ತಮ್ಮ ಹಾರೈಕೆ ಹಾಗೂ ಆಶೀರ್ವಾದದ ನಿರೀಕ್ಷೆಗಳೊಂದಿಗೆ,

ಇಂತಿ ನಿಮ್ಮವ

**ಕೆ. ರತ್ನಾಕರ ಹೆಗ್ಡೆ**

ನಿವೃತ್ತ ಎಕ್ಸಿಕ್ಯೂಟಿವ್ ಡೈರೆಕ್ಟರ್ - ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ

ನಿವೃತ್ತ ಜನರಲ್ ಮ್ಯಾನೇಜರ್ - ವಿಜಯಾ ಬ್ಯಾಂಕ್

ಮೊ : 99800 08239, 7019377060

ADVT.

**'ಸಮುದಾಯದ ಅಭಿವೃದ್ಧಿಗಾಗಿ ಸಮಗ್ರ ತಂಡದ ಆಯ್ಕೆ'**

# ಬಂಟರ ಸಂಘ ಬೆಂಗಳೂರು

## ಚುನಾವಣೆ: 2022-24

TEAM
PLEASE SUPPORT
RATHNAKAR HEGDE

## OFFICE BEARERS CANDIDATES



**PRESIDENT**

**ಕೆ. ರತ್ನಾಕರ ಹೆಗ್ಡೆ**

**K. RATNAKAR HEGDE**



**VICE PRESIDENT**

**ಡಾ. ಜಗದೀಶ್ ವಿ. ಶೆಟ್ಟಿ**

**Dr. Jagadish V. Shetty**



**HON. SECRETARY**

**ಆನಂದರಾಮ ಶೆಟ್ಟಿ ಬಿ.**

**ANANDRAM SHETTY B.**



**TREASURER**

**ಅಮರನಾಥ್ ಶೆಟ್ಟಿ ಎಚ್.**

**AMARNATH SHETTY H.**

"ಸಮುದಾಯದ ಅಭಿವೃದ್ಧಿಗಾಗಿ ಸಮಗ್ರ ತಂಡದ ಆಯ್ಕೆ"

ADVT.

# ಬಂಟರ ಸಂಘ ಬೆಂಗಳೂರು

## ಚುನಾವಣೆ : 2022-2024



ಸಮುದಾಯ ಬಾಂಧವರೇ,

ಮುಂಬರುವ ಬೆಂಗಳೂರು ಬಂಟರ ಸಂಘದ ಚುನಾವಣೆಯಲ್ಲಿ ಮಹಿಳಾ ಉಪಾಧ್ಯಕ್ಷೆ ಸ್ಥಾನದ ಸೇವಾಕಾಂಕ್ಷಿಯಾಗಿ ಬಂಟರ ಸಂಘದ ಮೂಲಕ ಸಮುದಾಯ ಸೇವೆಗೆ ಅವಕಾಶ ಮಾಡಿಕೊಡಬೇಕಾಗಿ ಸವಿನಯ ವಿನ್ನಹ. 2014-16ನೇ ಸಾಲಿನ ಕಾರ್ಯಕಾರಿ ಸಮಿತಿ ಸದಸ್ಯೆ ಹಾಗೂ ಮಹಿಳಾ ವಿಭಾಗದ ಚೇರ್‌ಪರ್ಸನ್ ಆಗಿ ವಿವಿಧ ಉಪ ಸಮಿತಿಯಲ್ಲೂ ಸಕ್ರಿಯಳಾಗಿ ಸಂಘದ ಕಾರ್ಯ ಚಟುವಟಿಕೆಯಲ್ಲಿ ನಿರಂತರವಾಗಿ ಭಾಗಿಯಾಗಿರುತ್ತೇನೆ.

ಆದ್ದರಿಂದ, ಮುಂಬರುವ ಸಂಘದ ಚುನಾವಣೆಯಲ್ಲಿ ಮಹಿಳಾ ಉಪಾಧ್ಯಕ್ಷೆ ಸ್ಥಾನಕ್ಕೆ ಆಯ್ಕೆ ಮಾಡಿ ನನ್ನನ್ನು ಆಶೀರ್ವದಿಸಬೇಕೆಂದು ವಿನಂತಿಸುತ್ತಿದ್ದೇನೆ.

ತಮ್ಮ ಹಾರೈಕೆ ಹಾಗೂ ಆಶೀರ್ವಾದದ ನಿರೀಕ್ಷೆಗಳೊಂದಿಗೆ,

ಇಂತಿ ನಿಮ್ಮವಳು,

**ರೋಹಿಣಿ ಜಿ. ಶೆಟ್ಟಿ**

ಕಾರ್ಯಕಾರಿ ಸಮಿತಿ ಸದಸ್ಯೆ ಮತ್ತು ಮಹಿಳಾ
ವಿಭಾಗದ ಅಧ್ಯಕ್ಷೆ (2014-2016) ಬಂಟರ ಸಂಘ, ಬೆಂಗಳೂರು
ಮೊ: 9886634504

ADVT.

# ಬೆಂಗಳೂರು ಬಂಟರ ಸಂಘದ ಚುನಾವಣೆ 2022

**ಪ್ರೀತಿಯ ಸಮಾಜ ಬಾಂಧವರೆ,**

**ಈ ವರ್ಷ (2022) ನಡೆಯಲಿರುವ ಬಂಟರ ಸಂಘ ಬೆಂಗಳೂರು ಚುನಾವಣೆಯಲ್ಲಿ ಸ್ಪರ್ಧಿಸುತ್ತಿರುವ ನಮ್ಮ ತಂಡದ ಪದಾಧಿಕಾರಿ ಅಭ್ಯರ್ಥಿಗಳ ಪಟ್ಟಿಯನ್ನು ನಿಮ್ಮ ಮುಂದಿಟ್ಟಿದ್ದೇವೆ.**

**ನಮ್ಮ ಸಮಾಜದ ಹಿರಿಯರು ಬಹಳಷ್ಟು ವರ್ಷಗಳಿಂದ ಶ್ರಮಿಸಿ ಕಟ್ಟಿ ಬೆಳೆಸಿದ ಸಂಘವನ್ನು ಅತ್ಯಂತ ನಿಷ್ಠೆ ಮತ್ತು ಪ್ರಾಮಾಣಿಕತೆಯಿಂದ ಉಳಿಸಿ ಬೆಳೆಸಿಕೊಂಡು ಹೋಗಬೇಕೆನ್ನುವ ಧ್ಯೇಯೋದ್ದೇಶದೊಂದಿಗೆ ಸಮಾನ ಮನಸ್ಕರಾದ ನಾವು 6 ಮಂದಿ ಪದಾಧಿಕಾರಿ ಅಭ್ಯರ್ಥಿಗಳ ಮತ್ತು 15 ಮಂದಿ ಕಾರ್ಯಕಾರಿ ಸಮಿತಿ ಸದಸ್ಯ ಅಭ್ಯರ್ಥಿಗಳನ್ನೊಳಗೊಂಡ ಸುಶಿಕ್ಷಿತ ಹಾಗೂ ಪ್ರಜ್ಞಾವಂತರ ತಂಡವನ್ನು ರಚಿಸಿದ್ದೇವೆ. ಸಂಘದ ಸೇವೆಯೇ ನಮ್ಮ ಮೂಲ ಉದ್ದೇಶವಾಗಿದ್ದು ಅರ್ಹ ಅಭ್ಯರ್ಥಿಗಳನ್ನೊಳಗೊಂಡ ನಮ್ಮ ತಂಡವನ್ನು ಹರಸಿ ಆರಿಸಬೇಕೆಂದು ವಿನಂತಿಸಿಕೊಳ್ಳುತ್ತೇವೆ.**

## ಪೃಥ್ವಿರಾಜ್ ರೈ ಸಾರಥ್ಯದಲ್ಲಿ ನಮ್ಮ ತಂಡ



ಅಧ್ಯಕ್ಷ ಸ್ಥಾನದ ಅಭ್ಯರ್ಥಿ
ಕೆ.ಬಿ. ಪೃಥ್ವಿರಾಜ್ ರೈ



ಉಪಾಧ್ಯಕ್ಷ ಸ್ಥಾನದ ಅಭ್ಯರ್ಥಿ
ಸಂಪನ್ನ ಕುಮಾರ್ ಶೆಟ್ಟಿ



ಉಪಾಧ್ಯಕ್ಷೆ ಸ್ಥಾನಕ್ಕೆ
ರೋಹಿಣಿ ಜಿ ಶೆಟ್ಟಿ



ಗೌ॥ ಕಾರ್ಯದರ್ಶಿ ಸ್ಥಾನದ ಅಭ್ಯರ್ಥಿ
ವಿಜಯ ಕುಮಾರ್ ಶೆಟ್ಟಿ, B.E.



ಜಂಟಿ ಕಾರ್ಯದರ್ಶಿ ಸ್ಥಾನಕ್ಕೆ
ಡಿಂಪಲ್ ಕೆ ಶೆಟ್ಟಿ



ಖಜಾಂಚಿ ಸ್ಥಾನದ ಅಭ್ಯರ್ಥಿ
ಡಾ॥ ಉಮಾನಾಥ ಶೆಟ್ಟಿ ವೈ.

**“ಸಂಘದ ಹಿತಾಸಕ್ತಿ ನಮ್ಮ ಆಸಕ್ತಿ.”**

ADVT.

# ಉಚಿತ ವೈದ್ಯಕೀಯ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ










# Career Connect Counseling for the Commerce Student of Bunts' Sangha RNS Vindyaniketan Composite PU College Conducted by CA. Kishor Shetty




The Programme was started by an invocation song followed by lighting the lamp and address by the Principal.

The speaker of the day, CA Kishor Shetty began the session with a quote of Sri Swami Vivekananda, “Believing in you is strength and fear is weakness”.

Then he talked about career and the importance of choosing it based on one’s interest, passion and likes. He elaborated about is career opportunities in the banking sector. The highest position and the type of exams to get into a bank job, the roles and responsibilities.

The next explored field was on Masters in Business Administration. The combination like marketing, Human Resource Management, Retail Management, International Finance were explained in brief and the types of employment opportunities were explained.

He explained about different professional courses like CA, CS, CMA and the scope for the above in our country. And he also told that in case people find it difficult to be a CA they can start their own Tax Consultancy services with the experience and knowledge they gain during CA articleship.

The guest speaker gave an indepth insight on the Digital Market and its scope and roles to be performed.

The next career option given was B.com, LLB and evergreen profession to those who wish and always win an argument. During the discussion of this topic be also explained about the roles of Judges and how apt this profession for women as well.

Now it’s a field without which getting jobs or any other option of career in difficult, including business or any other entrepreneurship. Many students lack in their studies or don’t perform well but always have a better ideas and will be creative, and they must get into business was the suggestion given by the speaker.

He also gave an idea about taking up civil services by clearing UPSC exams. The level of interviews, job roles, famous personalities at present who are contributing to society and suggestions was given to get into Army if they have an urge to serve the nation.

The ways to get into income tax department and the various job roles available were also discussed. Along with this he also suggested how students may take up the others courses and continue their graduation by joining evening college.

The speaker explained in depth about; Banking career, MBA, Digital Marketing, Law as career, Government Jobs (IAS /IPS/ IRS/ Income Tax), Tax consultant, CA/CS/CMA

# ಇರುಳು ರಸ್ತೆಯಲ್ಲಿ ಬೆಳಕಿನ ಯುದ್ಧ



ಪ್ರದೀಪ್ ಶೆಟ್ಟಿ ಬೇಳೂರು

ನಮಸ್ತೆ ಮಿತ್ರರೇ, ನಾವು ಇಂದು ಜೀವಿಸುತ್ತಿರುವ ಕಾಲಮಾನ ತಂತ್ರಜ್ಞಾನದಲ್ಲಿ ದಿನಕ್ಕೊಂದು ಹೊಸ ಆವಿಷ್ಕಾರ ಆಗುತ್ತಿರುವ ಸಮಯ. ಪ್ರತಿಯೊಂದು ವಿಷಯದ ಬಗೆಗೂ ಜಗತ್ತಿನ ಯಾವುದಾದರೂ ಒಂದು ಜಾಗದಲ್ಲಿ ಸಂಶೋಧನೆ ನಡೆಯುತ್ತಲೇ ಇದೆ. ಅದೇ ರೀತಿ ಮನುಷ್ಯ ಪ್ರಪಂಚದ ವಿವಿಧ ಭಾಗಗಳ ಜೊತೆ ಸಂವಹನ ನಡೆಸಲು ಭೂ ಮಾರ್ಗ, ಜಲ ಮಾರ್ಗದ ಮೂಲಕ ಸಂಪರ್ಕ ಸಾಧಿಸಿದ್ದಾನೆ. ಭೂ ಮಾರ್ಗದಲ್ಲಿ ರಸ್ತೆಯ ಮೂಲಕ ಮನುಷ್ಯ ಸಂಪರ್ಕಕ್ಕಾಗಿ ಹಲವು ಪ್ರಕಾರದ ಸಂಪರ್ಕ ಸಾಧನಗಳನ್ನು ಉತ್ಪಾದನೆ ಮಾಡಿ ಜನರ ಉಪಯೋಗಕ್ಕಾಗಿ ಮಾರುಕಟ್ಟೆಗೆ ಪರಿಚಯಿಸಿದ್ದಾರೆ ಹಾಗೂ ಮತ್ತಷ್ಟು ಅನ್ವೇಷಣೆಯಲ್ಲಿ ತೊಡಗಿಯೂ ಇದ್ದಾರೆ.

ವಾಹನ ಚಾಲನೆಯೆನ್ನುವುದು ಎಳೆಯ ವಯಸ್ಸಿನವರಿಂದ ಹಿಡಿದು ವೃದ್ಧರವರೆಗೆ ನಾವು ನೋಡಬಹುದಾದ ಸರ್ವೇ ಸಾಮಾನ್ಯವಾದ ಸಂಗತಿ. ಇಂದಿನ ಪರಿಸ್ಥಿತಿಯಲ್ಲಿ ಪ್ರತಿ ಮನೆಯಲ್ಲೂ ಮೋಟಾರ್ ವಾಹನಗಳನ್ನು ಕಾಣಬಹುದು. ಹೀಗಿರುವಾಗ ಶೇಕಡಾವಾರು ಅತಿ ಹೆಚ್ಚು ಜನರು ತಮ್ಮ ದೈನಂದಿನ ಕಾರ್ಯಕ್ಕೆ ಸ್ವಂತ ವಾಹನಗಳು ಅದರಲ್ಲೂ ದ್ವಿಚಕ್ರ ವಾಹನಗಳನ್ನು ಉಪಯೋಗಿಸುವುದು ಸಹಜವಾದ ಪ್ರಕ್ರಿಯೆ. ಬೆಳಿಗ್ಗೆ ಎದ್ದು ತಮ್ಮ ತಮ್ಮ ಕೆಲಸಗಳಿಗೆ ಮನೆಯನ್ನು ತೊರೆಯುವ ಜನರು ಮತ್ತೆ ಮನೆಯ ಗೂಡಿಗೆ ಸೇರುವುದು ಸೂರ್ಯ ತನ್ನ ಪಾಳಿಯನ್ನು ಮುಗಿಸಿ ವಿಶ್ರಾಂತಿಗೆ ಹೊರಟ ಮೇಲೆಯೇ. ಹಗಲು ಪೂರ್ತಿ ಕೆಲಸದ ಸ್ಥಳದಲ್ಲಿ ಇದ್ದು ಬಳಲಿ ಮನೆಯ ದಾರಿ ಹಿಡಿದು ಹೊರಟಾಗ ರಸ್ತೆಯ ಮೇಲೆ ಮನೆ ಮುಟ್ಟುವ ತನಕ ವಾಹನಗಳ ಮಧ್ಯೆ ನಡೆಯುವ ಕಾದಾಟ ಒಂದು ತರಹದ ಬೆಳಕಿನ ಯುದ್ಧವೇ ಅನ್ನಬಹುದು. ಏಕೆಂದರೆ ಇಂದಿನ ಹೊಸ ಮಾದರಿಯ ವಾಹನಗಳಲ್ಲಿ ವಿವಿಧ ತರಹದ ಬೆಳಕಿನ ಪ್ರಸರಣ ಇರುವುದರಿಂದ ವಿರುದ್ಧ ದಿಕ್ಕಿನಲ್ಲಿ ಬರುವ ಸವಾರರ ಕಣ್ಣಿಗೆ ಕಪ್ಪು ಬಟ್ಟೆ ಕಟ್ಟುವಷ್ಟು ಪ್ರಕರತೆಯಿಂದ ಕೂಡಿರುತ್ತದೆ. ಇಡೀ ದಿನ ಮನಸ್ಸಿಗೆ ಆಗಿರುವ ನೋವು, ನಲಿವು ಇತ್ಯಾದಿ ವಿಷಯಗಳನ್ನು ತಮ್ಮ ಪ್ರೀತಿ ಪಾತ್ರರ ಜೊತೆ ಕುಳಿತು ಹಂಚಿಕೊಳ್ಳುವ ಆಸೆಯಲ್ಲಿ ಹೊರಟ ಜನರು ಒಂದು ಕಡೆಯಾದರೆ, ಮನೆಯಲ್ಲಿ ಇಷ್ಟು ಹೊತ್ತಾದರೂ ಮನೆ ಮುಟ್ಟಲಿಲ್ಲವಲ್ಲ, ಏನಾಗುವುದೋ ಎನ್ನುವ ಭಯದಲ್ಲಿ ಕಾಯುತ್ತಿರುವವರು ಇನ್ನೊಂದು ಕಡೆ. ಈ ಸನ್ನಿವೇಶ ಪ್ರಯಾಣಿಸುವ ಪ್ರತಿಯೊಬ್ಬರಿಗೂ ಒಂದೇ ಆದರೂ ಕೂಡ ಬಹುತೇಕ ಮಂದಿ ವಾಹನಗಳನ್ನು ಚಲಾಯಿಸುವಾಗ ಅದರಲ್ಲೂ ಇರುಳು ಸಮಯದಲ್ಲಿ ಡಿಮ್–ಡಿಪ್ ಸೌಲಭ್ಯವನ್ನು ಉಪಯೋಗಿಸುವ ಗೋಜಿಗೆ ಹೋಗದೆ ಒಂದೇ ಪ್ರಕರತೆಯ ಬೆಳಕನ್ನು ಚೆಲ್ಲುತ್ತ ಕೆಟ್ಟ ವಾತಾವರಣವನ್ನು ಸೃಷ್ಟಿಸುತ್ತಾರೆ. ಈ ಸೌಲಭ್ಯ ಇರುವುದರ ಬಗ್ಗೆ ಸವಾರರಿಗೆ ಮಾಹಿತಿಯ ಕೊರತೆಯೋ ಅಥವಾ ಎದುರುಗಡೆಯಿಂದ ಬರುವ ವ್ಯಕ್ತಿಗಳ ಕಡೆ ಇರುವ ನಿರ್ಲಕ್ಷ್ಯವೋ ಒಂದೂ ತಿಳಿಯದು. ಆದರೆ ಈ ವಾಹನಗಳ ವಿವಿಧ ಪರಿಯ ಬೆಳಕಿನ ಪ್ರಸರಣದಿಂದ ನಿತ್ಯವೂ ರಸ್ತೆಯಲ್ಲಿ ಸಮಸ್ಯೆ ಉಂಟಾಗುವುದು ಸರ್ವೇ ಸಾಮಾನ್ಯ ಮತ್ತು ಹಲವು ಬಾರಿ ಭೀಕರ ದುರಂತಕ್ಕೆ ಎಡೆ ಮಾಡಿಕೊಡುತ್ತದೆ. ವಾಹನದ ಮುಂಭಾಗ ಹಾಕಬಹುದಾದ ಬೆಳಕಿನ ವ್ಯವಸ್ಥೆ ಬಗ್ಗೆ ಕಾನೂನು ಕಟ್ಟಳೆಗಳು ಅದೆಷ್ಟೋ ಇದ್ದರೂ ಮನುಷ್ಯರ ಅಹಂಕಾರ, ದುಡ್ಡಿನ ದರ್ಪ ಮತ್ತು ದುಡ್ಡಿನ ಮೂಲಕವೇ ಒಂದು ವ್ಯವಸ್ಥೆಯನ್ನು ತನಗೆ ಬೇಕಾದ ಹಾಗೆ ಉಪಯೋಗಿಸಿಕೊಳ್ಳುವ ಮನೋಭಾವವೇ ಇಂತಹ ತಪ್ಪುಗಳಿಗೆ ದಾರಿ ಮಾಡಿಕೊಟ್ಟಿವೆ.

ಮನುಷ್ಯ ನಿತ್ಯವೂ ಹೋರಾಟ ನಡೆಸುವುದೆ ಅವರು ಮತ್ತು ಕುಟುಂಬದ ಸುಂದರ ಮತ್ತು ನೆಮ್ಮದಿಯ ಬದುಕಿಗಾಗಿ. ಆದರೆ ನಮ್ಮ ಕುಟುಂಬದ ಕಡೆಗೆ ಇರುವ ಕಾಳಜಿಯಲ್ಲಿ ಕೊಂಚವಾದರೂ ಸಮಾಜದ ಮೂರನೇ ವ್ಯಕ್ತಿಯೆಡೆಗೆ ತೋರ್ಪಡಿಸುವ ಮನೋಭಾವ ನಮ್ಮಲ್ಲಿ ಜಾಗೃತವಾದರೆ ಇಂತಹ ತಪ್ಪುಗಳು ಇರುಳು ರಸ್ತೆಯಲ್ಲಿ ಸಂಭವಿಸದಂತೆ ಮುನ್ನೆಚ್ಚರಿಕೆ ವಹಿಸಬಹುದು. ಈ ಭೂಮಿಯಲ್ಲಿ ಹುಟ್ಟುವ ಪ್ರತಿಯೊಬ್ಬ ಮನುಷ್ಯನ ಜೀವವೂ ಅತ್ಯಮೂಲ್ಯವೇ, ಆತ ಬಡವ ಬಲ್ಲಿದ ಎನ್ನುವ ಭೇದ ಭಾವ ನಾವು ಮನುಷ್ಯರು ಮಾಡಿಕೊಂಡಿರುವ ಕಟ್ಟುಪಾಡುಗಳಷ್ಟೇ. ಹಾಗಾಗಿ ಇರುಳಲ್ಲಿ ಸಂಚರಿಸುವಾಗ ಸ್ವಲ್ಪ ಗಮನ ಬೇರೆಯವರ ಬಗ್ಗೆ ಇರಬೇಕು ಎನ್ನುವ ಭಾವ ಮೂಡಲಿ ಎನ್ನುವುದೇ ಈ ಲೇಖನದ ಉದ್ದೇಶ ಮತ್ತು ಆಶಯ.

# ಕೊಂಕುಜೀವಿಯ ಮೆಲುಕು – 5
## ಶ್ರೀಸಾಮಾನ್ಯ ಸುಮ್ಮನಿರಬೇಕು ಯಾಕೆ?


ಪ್ರಕಾಶ್ ಶೆಟ್ಟಿ

ದಿನಪತ್ರಿಕೆ ಓದುಗರಿಗೆ ಬಹಳ ಹಿಂದಿನಿಂದಲೂ ಅತ್ಯಂತ ಪರಿಚಿತ ಅಂಕಣವೆಂದರೆ ಮುಖಪುಟದಲ್ಲಿ ಪ್ರಕಟವಾಗುವ ವ್ಯಂಗ್ಯಚಿತ್ರ. ಅದನ್ನು ಪಾಕೆಟ್ ಕಾರ್ಟೂನ್ ಎಂದೇ ಕರೆಯುತ್ತಿದ್ದರು. ಅದನ್ನು ಪತ್ರಿಕೆಯ ಒಂದು ಅವಿಭಾಜ್ಯ ಅಂಗವಾಗಿ ಮಾಡಿದ ಕೀರ್ತಿ ಖಂಡಿತವಾಗಿಯೂ ಆರ್. ಕೆ. ಲಕ್ಷ್ಮಣ್ ಅವರಿಗೆ ಸಲ್ಲಬೇಕು. ನನಗೆ ತಿಳಿದಂತೆ ವಿದೇಶಿ ದಿನ ಪತ್ರಿಕೆಗಳಲ್ಲೂ ಮುಖಪುಟದಲ್ಲಿ ಪಾಕೆಟ್ ಕಾರ್ಟೂನ್ ಪ್ರಕಟಿಸುವ ರೂಢಿಯೇ ಇರಲಿಲ್ಲ. ಟೈಮ್ಸ್ ಆಫ್ ಇಂಡಿಯಾದವರು ಹಿಡಿದ ಹಾದಿಯನ್ನು ಇತರ ಪತ್ರಿಕೆಗಳೂ ಅನುಸರಿಸಿದ್ದರಿಂದ ದೊಡ್ಡ ಪ್ರಯೋಜನವಾದುದು ನನ್ನಂತಹ ಅನೇಕ ವ್ಯಂಗ್ಯಚಿತ್ರಕಾರರಿಗೆ. ಇಲ್ಲದಿದ್ದರೆ ನಾನು ಕಾಲೇಜು ದಿನಗಳಲ್ಲೇ ದಿನಪತ್ರಿಕೆಯ ಕಾರ್ಟೂನಿಸ್ಟ್ ಆಗಬೇಕೆಂಬ ಕನಸು ಕಾಣುವ ಗೋಜಿಗೇ ಹೋಗುತ್ತಿರಲಿಲ್ಲ.

ಕಾರ್ಟೂನಿನಲ್ಲಿ ಶ್ರೀಸಾಮಾನ್ಯನ ಒಂದು ಪಾತ್ರ ಇರಬೇಕು ಅನ್ನುವುದೂ ಕೂಡ ಆರ್. ಕೆ. ಲಕ್ಷ್ಮಣ್ ಹಾಕಿದ ಬುನಾದಿ. ಅದರಂತೆ ನಾನೂ ಸೇರಿದ ದಿನಪತ್ರಿಕೆಗಳಲೆಲ್ಲ ಅಂತಹ ಒಬ್ಬ ವ್ಯಕ್ತಿಯನ್ನು ಸೃಷ್ಟಿಸುತ್ತಿದ್ದೆ. ನಾನು 'ಟೈಮ್ಸ್ ಆಫ್ ಡೆಕ್ಕನ್' ಇಂಗ್ಲೀಷ್ ದಿನಪತ್ರಿಕೆಗೆ ಸೇರಿದಾಗ (1982) 'On the spot with Prakash' ಕಾರ್ಟೂನ್ ಮಾಡುವ ಅತ್ಯಪೂರ್ವ ಅವಕಾಶ ಸಿಕ್ಕಿತು. ನನ್ನ ಶ್ರೀಸಾಮಾನ್ಯ ಹೇಗಿರಬೇಕು? ಎಂಬುದರ ಬಗ್ಗೆ ಸಿಕ್ಕಾಪಟ್ಟೆ ತಲೆಕೆಡಿಸಿಕೊಂಡೆ. ಆ ಹೊತ್ತಿಗೆ ಲಕ್ಷ್ಮಣ್ ಅವರ ಶ್ರೀಸಾಮಾನ್ಯ ಮತ್ತು 'ಡೆಕ್ಕನ್ ಹೆರಾಲ್ಡ್' ಮೂರ್ತಿ ಅವರ ಮಿಸ್ಟರ್ ಸಿಟಿಜನ್ ನನ್ನನ್ನು ತುಂಬಾ ಕಾಡತೊಡಗಿತು. ನನಗೆ ಎದುರಾದ ಗೊಂದಲವೇನೆಂದರೆ, ಅದ್ಯಾಕೆ ಶ್ರೀಸಾಮಾನ್ಯ ಯಾವತ್ತೂ ಗಪ್ ಚುಪ್ ಇರಬೇಕು? ಅವನು ಇತರರ ಧ್ವನಿಯಾದರೇನೇ ಚಂದ ಅಲ್ಲವೇ? ಎಂದೆಲ್ಲ ಅನಿಸ ತೊಡಗಿತು. ಅಂದು ನನಗೆ ನೆನಪಾದದ್ದು ಉದಯವಾಣಿಯಲ್ಲಿ ಬರುತಿದ್ದ 'ಶಿಂಗಣ್ಣ'. ರಘು (ರಾಮಕೃಷ್ಣ) ಅವರ ಶಿಂಗಣ್ಣನಿಗೆ ಖಡಕ್ಕಾಗಿ ಮಾತನಾಡುವ ಅಭ್ಯಾಸವಿತ್ತು. ಆ ಕಾರಣಕ್ಕೆ ಲಕ್ಷ್ಮಣ್ ಮತ್ತು ಮೂರ್ತಿ ಅವರ ಶ್ರೀಸಾಮಾನ್ಯರಿಗಿಂತ ಶಿಂಗಣ್ಣನೇ ಹೆಚ್ಚು ಇಷ್ಟವಾಗುತ್ತಿದ್ದ.

ನಾನು ಶ್ರೀಸಾಮಾನ್ಯನಿಗೆ ಧ್ವನಿ ಕೊಡಲು ನಿರ್ಧರಿಸಿದೆ. ಅಷ್ಟೇ ಅಲ್ಲ. ವಯಸ್ಸಾಗಿರುವ ಶ್ರೀಸಾಮಾನ್ಯನೇ ಯಾಕೆ ಬೇಕು? ಎಂದು ಯುವಕನನ್ನು ಆಯ್ಕೆ ಮಾಡಿದೆ.

ಅಲ್ಲಿಂದ ಮುಂದೆ ನಾನೂ ಯಾವ ದಿನಪತ್ರಿಕೆಗೆ ಕೆಲಸ ಮಾಡಿದಾಗಲೂ, ನನ್ನ ಶ್ರೀಸಾಮಾನ್ಯನಿಗೆ ಅಸ್ತಿತ್ವ ಕೊಡಲು ಮರೆಯಲಿಲ್ಲ. 'ದ ವೀಕ್'ನಲ್ಲಿ ನನ್ನ ಒಂದು ಪುಟದ 'The Passing Show' ಅಂಕಣದಲ್ಲಂತೂ ಯಾರೂ ಊಹಿಸದ ಒಬ್ಬ ವ್ಯಕ್ತಿಯನ್ನು (ಕ್ಯಾರೆಕ್ಟರ್) ಪರಿಚಯಿಸಿದೆ. ಸೂತ್ರದಾರ ಪುರುಷನೇ ಆಗಬೇಕಾಗಿಲ್ಲ ಎಂಬ ಸಿಂಪಲ್ 'ಕಾಮನ್ ಸೆನ್ಸ್' ನನಗೆ ಸೂತ್ರದಾರಿಣಿಯೊಬ್ಬಳನ್ನು ಸೃಷ್ಟಿಸುವುದಕ್ಕೆ ಪ್ರೇರೇಪಿಸಿತು. ಆ ನನ್ನ ಹುಡುಗಿ ಎಷ್ಟು ಮಾಡ್ ಹುಡುಗಿ ಆಗಿದ್ದಳೆಂದರೆ ಫ್ಯಾಷನ್‌ಗಾಗಿ ತಲೆ ಕೂದಲನ್ನೇ ಬೋಳಿಸಿಕೊಂಡಿದ್ದಳು!

ಪ್ರಜಾವಾಣಿ ಸೇರುವುದಕ್ಕೆ ಮೊದಲು ಕನ್ನಡದ ವಿವಿಧ ಪತ್ರಿಕೆಗಳಿಗೆ ಪಾಕೆಟ್ ಕಾರ್ಟೂನ್‌ಗಳನ್ನು ಸಿಂಡಿಕೇಟ್ ಮಾಡುತ್ತಿದ್ದಾಗ ಅದರಲ್ಲಿನ ಸೂತ್ರದಾರ ಬೇರೆ ಯಾರೂ ಆಗಿರಲಿಲ್ಲ. ನಾನೇ ಕಾರ್ಟೂನ್ ಆಗಿಬಿಟ್ಟಿದ್ದೆ!

'ಚಿನಕುರಳಿ'ಗಾಗಿ 'ಕಾರ್ಟೂನ್ ಸೂತ್ರದಾರ'ನ ಹುಡುಕಾಟಕ್ಕಿಳಿದಿದ್ದೆ. ಬೋಳು ತಲೆ, ಗಡ್ಡದಾರಿ, ದಪ್ಪ ಹುಬ್ಬು, ಕನ್ನಡಕ ಮತ್ತು ಕುಳ್ಳಗಿನ ವ್ಯಕ್ತಿಯ ಕಲ್ಪನೆ ಇತ್ತು. ಇದನ್ನು ರಚಿಸುವಾಗ ಯಾವ ನಿರ್ದಿಷ್ಟ ವ್ಯಕ್ತಿಯೂ ನನ್ನ ಮುಂದಿರಲಿಲ್ಲ. ಆದರೆ ನನ್ನ ಹಳೆಯ ಸಹೋದ್ಯೋಗಿ ಗಣೇಶ್ ಕಾಸರಗೋಡು ಮಾತ್ರ ಅದು ಅವರದ್ದೇ ಚಿತ್ರ ಎಂದು ಇಂದಿಗೂ ನಂಬಿಕೊಂಡಿದ್ದಾರೆ! 'ಪ್ರಜಾವಾಣಿ'ಯ ಮುಖಪುಟದಲ್ಲಿ ನಿತ್ಯವೂ ಕಾಣಿಸಿಕೊಳ್ಳುತ್ತಿದ್ದೇವೆ ಎಂದು ಇನ್ನೆಷ್ಟು ಮಂದಿ ಹೆಮ್ಮೆ ಪಟ್ಟುಕೊಳ್ಳುತ್ತಿದ್ದಾರೋ ಗೊತ್ತಿಲ್ಲ.

ನಾನು ಈಚೆಗೆ 'ಚಿನಕುರಳಿ'ಯಲ್ಲಿ ಒಂದು ವಿಶೇಷತೆ ಗಮನಿಸಿದೆ. ಸಾಧಾರಣವಾಗಿ ವ್ಯಂಗ್ಯಚಿತ್ರಕಾರರು ತಮ್ಮ ಕಾರ್ಟೂನ್‌ಗಳಲ್ಲಿ ಮುಖಗಳನ್ನು ಸರಿಸುಮಾರು ಒಂದೇ ಧಾಟಿಯಲ್ಲಿ ಚಿತ್ರಿಸುತ್ತಾರೆ. ಸಿನಿಮಾಗಳಲ್ಲಿ ನಟ ನಟಿಯರು ಬೇರೆ ಬೇರೆ ಪಾತ್ರಗಳಲ್ಲಿ ಬರುವಂತೆ! ಆದರೆ 'ಚಿನಕುರಳಿ'ಯಲ್ಲಿ ನೀವು ಪ್ರತಿ ದಿನವೂ ವಿವಿಧ ಮುಖಛಾಯೆಯ ಜನರನ್ನು ನೋಡಿರುತ್ತೀರಿ ಎಂದು ನನ್ನ ಬಲವಾದ ನಂಬಿಕೆ. ಅಂದರೆ ಕಳೆದ ಎಂಟು ವರ್ಷಗಳಲ್ಲಿ ಓದುಗರು ಬಹಳಷ್ಟು ಮುಖಗಳನ್ನು ಕಂಡಿರಬಹುದಲ್ಲವೇ!! ಅನ್ವೇಷಣೆಗೆ ತೊಡಗಿದರೆ ಗೊತ್ತಾಗಬಹುದೇನೋ! (ಇದನ್ನು ಓದಿದ ಮೇಲೆ ಕೆಲವರಿಗೆ ಅದನ್ನು ಅನ್ವೇಷಿಸುವ ಕುತೂಹಲ ಹುಟ್ಟಿದರೆ ಆಶ್ಚರ್ಯವಿಲ್ಲ) ನಾನು ಪ್ರಜಾವಾಣಿಗೆ ಸೇರುವ ಮೊದಲು ನೂರಾರು ಜನರ ಕ್ಯಾರಿಕೇಚರ್ ಮಾಡುತ್ತಿದ್ದುದರಿಂದ ಅದರ ತೀವ್ರ ಪರಿಣಾಮ ಆಗಿದೆ ಎಂದನಿಸುತ್ತದೆ. ಪಾಕೆಟ್ ಕಾರ್ಟೂನ್ ಜಗತ್ತಿನಲ್ಲಿ ಮೊದಲ ಬಾರಿ ನನಗೆ ಅರಿವಿಲ್ಲದೇ ಅಂತಹ ಒಂದು ವಿಶೇಷತೆ ಸಂಭವಿಸಿರಲೂಬಹುದು.

ಇಂತಹ ಸೂಕ್ಷ್ಮತೆಗಳನ್ನು ಓದುಗರು ಗಮನಿಸುತ್ತಾರೋ ಗೊತ್ತಿಲ್ಲ. ಅಂದಹಾಗೆ ಕಳೆದ ವರ್ಷ ಕೊರೊನ ಹೆಮ್ಮಾರಿ ಬಂದಾಗಿನಿಂದ ಮಾಸ್ಕ್ ನಿಯಮವನ್ನು ಕಟ್ಟುನಿಟ್ಟಾಗಿ ಪಾಲಿಸಿದ ವ್ಯಕ್ತಿ ನಮ್ಮ ದೇಶದಲ್ಲಿದ್ದರೆ ಅದು ನನ್ನ ಶ್ರೀಸಾಮಾನ್ಯ!

# ಹೆಣ್ಣು

ಮನೆಮನವ ಬೆಳಗುವ ಬೆಳಕು ಹೆಣ್ಣು.!
ಪ್ರತಿಉಸಿರಿಗೆ ಹೆಸರುನೀಡುವ
ಹೊಂಬೆಳಕು ಹೆಣ್ಣು..!
ಜನನಕ್ಕೂ ಜೀವನಕ್ಕೂ
ಸುಂದರ ಶಿಲ್ಪಿ ಹೆಣ್ಣು..!
ಸಾಧನೆಯ ಹಾದಿಯಲ್ಲಿ
ಬೆಳೆದು ನಿಂತ ಸಬಲೆ ಹೆಣ್ಣು..!
ಸರ್ವಶಕ್ತೇ ಸರ್ವತತ್ವ
ಅವಳೇ ವಿಶ್ವತತ್ವ ಹೆಣ್ಣು.!

ಪ್ರೀತಿಯ ಪ್ರತಿರೂಪ ಹೆಣ್ಣು.!
ಪ್ರಕೃತಿಯ ಪ್ರತಿಬಿಂಬ ಹೆಣ್ಣು.!
ಉಸಿರಿನ ಕಣ್ಣು ಹೆಣ್ಣು .!
ಆನಂದದ ಆಶಾಕಿರಣ ಹೆಣ್ಣು.!
ಸಾಧನೆಯ ಪ್ರತೀಕ ಹೆಣ್ಣು.!
ಆದಿಶಕ್ತಿಯ ಸ್ವರೂಪ ಹೆಣ್ಣು.!
ಕ್ಷಮಯಾ ಧರಿತ್ರಿಯೂ ಹೆಣ್ಣು.!
ಹೆಣ್ಣೇ ನಿನಗೆ ನೀನೇ ಸರಿಸಾಟಿ .!

ಸಂಬಂಧಗಳಿಗೆ ಬಾಂಧವ್ಯದ
ಬೆಸುಗೆಯಾಗುವವಳು ಹೆಣ್ಣು.!
ಪ್ರೀತಿ ಮಮತೆ ವಾತ್ಸಲ್ಯದಲ್ಲಿ
ಮೇರುಪರ್ವತವೂ ಹೆಣ್ಣು.!
ಕರುಣೆಯ ಕಂಬನಿಯೊಳಗೆ
ಮಮತೆಯ ದೀಪಬೆಳಗಿ
ಬೆಳಕಾದವಳು ಹೆಣ್ಣು.!
ಸಾಗರದಂಥ ಶಕ್ತಿಯೊಂದಿಗೆ
ಅದ್ಭುತ ಯುಕ್ತಿಯುಳ್ಳವಳೂ ಹೆಣ್ಣು.!
ಪುರುಷನಿಗೆ ಸ್ಫೂರ್ತಿಯಾದವಳು ಹೆಣ್ಣು.!
ನೊಂದಾಗ ನೆರಳಾಗುವವಳು ಹೆಣ್ಣು.!
ಆಸರೆಯ ದೇವತೆಯೂ ಹೆಣ್ಣು..!
ಮನೆಮನದ ಬೆಳಕು ಹೆಣ್ಣು.!

**ಜಯಲಕ್ಷ್ಮಿ .ಸಿ .ಶೆಟ್ಟಿ**

(ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಪ್ರಯುಕ್ತ)

# ಎಲ್ಲರೊಳಗೊಂದಾಗು



ಅನುಷಾ ಶೆಟ್ಟಿ

**ಹುಲ್ಲಾಗು ಬೆಟ್ಟದಡಿ, ಮನೆಗೆ ಮಲ್ಲಿಗೆಯಾಗು**
**ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೇ।**
**ಬೆಲ್ಲ–ಸಕ್ಕರೆಯಾಗು ದೀನ ದುರ್ಬಲರಿಗೆ**
**ಎಲ್ಲರೊಳಗೊಂದಾಗು ಮಂಕುತಿಮ್ಮ॥**

ಇದು ಡಿ.ವಿ.ಜಿಯವರ ಅದ್ಭುತ ಸಾಲುಗಳು. ಅರ್ಥಾತ್, ಒಬ್ಬ ವ್ಯಕ್ತಿಯ ಅಸ್ತಿತ್ವ ಇತರರಿಗೆ ಪ್ರಯೋಜನವಾಗಿರಬೇಕು. ಆತನ ಕೆಲಸ ಕಾರ್ಯಗಳು, ಒಳ್ಳೆಯ ನಡತೆ ಇತರರು ಮೆಚ್ಚುವಂತಿರಬೇಕು. ಬೇರೆಯವರ ಕಷ್ಟಕ್ಕೆ ಸ್ಪಂದಿಸುವ ಮನಸ್ಸಿರಬೇಕು. ಅಹಂಕಾರ, ದ್ವೇಷ, ಸ್ವಾರ್ಥ, ಅಸೂಯೆ ಇಲ್ಲದೇ ಎಲ್ಲರನ್ನೂ ತಮ್ಮವರೆಂದು ಪ್ರೀತಿಸುವ ವ್ಯಕ್ತಿತ್ವ ಇರಬೇಕು ಆಗಷ್ಟೇ ವ್ಯಕ್ತಿಯ ಜೀವನ ಪರಿಪೂರ್ಣವಾಗಬಲ್ಲದು.

ನಾವೇ ಕಷ್ಟದಲ್ಲಿರುವಾಗ ಪರರಿಗೆ ಎಲ್ಲಿಂದ ಸಹಾಯ ಮಾಡುವುದು? ನಮಗೆ ಅವಶ್ಯಕತೆಯಿದ್ದಾಗ ಯಾರೂ ಸಹಾಯ ಮಾಡಿಲ್ಲ, ನಾವ್ಯಾಕೆ ಇತರರಿಗೆ ಸಹಾಯ ಮಾಡಬೇಕು? ಇದು ಹಲವರ ಅನಿಸಿಕೆ. ಆದರೆ ಬೆಟ್ಟದಡಿಯ ಹುಲ್ಲು ತನ್ನಷ್ಟಕ್ಕೆ ತಾನು ಬೆಳೆದರೂ ಅದು ದನ–ಕರುಗಳಿಗೆ ಮೇವಾಗುತ್ತದೆ. ಹಾಗೆಯೇ ನಾವೂ ಯಾವುದಾದರೂ ರೀತಿಯಲ್ಲಿ ಇತರರಿಗೆ ಕೈಲಾದ ಸಹಾಯ ಮಾಡಬೇಕು. ಈ ಉಪಕಾರ ಕೇವಲ ಹಣದಿಂದಾಗಿರಬೇಕಿಲ್ಲ. ನಾವು ನಿಮ್ಮೊಂದಿಗಿದ್ದೇವೆ ಎಂದು ನೀಡುವ ವಿಶ್ವಾಸದಿಂದಾಗಿರಬಹುದು. ಇತ್ತೀಚೆಗೆ 'ದೇವರ ದುಡ್ಡು' ಎನ್ನುವ ಒಂದು ಹಳೆಯ ಸಿನಿಮಾ ವೀಕ್ಷಿಸಿದೆ. ಅರ್ಥಪೂರ್ಣ ಆದರ್ಶ ಬದುಕಿನ ಗುಟ್ಟು ಅದರಲ್ಲಿತ್ತು. ಸಂಕ್ಷಿಪ್ತವಾಗಿ ವಿವರಿಸುವುದಾದರೆ, ಶ್ರೀ ಕೃಷ್ಣನ ಪರಮ ಭಕ್ತೆಯಾದ ಪತ್ನಿಯು ದೇವರಿಗಾಗಿ ತೆಗಿದಿಟ್ಟ ಹಣವನ್ನು, ಹಣವೊಂದೇ ಎಲ್ಲ ಎಂದು ನಂಬಿದ್ದ ನಾಸ್ತಿಕ ಪತಿಯು ಬಳಸಿಕೊಳ್ಳುತ್ತಾನೆ. ಅದೇ ದಿನ ಆತನ ಕನಸಿನಲ್ಲಿ ಶ್ರೀ ಕೃಷ್ಣ ಪರಮಾತ್ಮನು ಪ್ರತ್ಯಕ್ಷನಾಗಿ ತನ್ನ ಹಣವನ್ನು ಹಿಂತಿರುಗಿಸುವಂತೆ ಹೇಳುತ್ತಾನೆ. ಆದರೆ ನಾಸ್ತಿಕನು ಅವನನ್ನು ನಿಂದಿಸುತ್ತಾನೆ. ದೇವರು ಆತನಿಗೆ ಹಣ ಕೊಟ್ಟು ನೋಡುತ್ತಾನೆ ಆ ವ್ಯಕ್ತಿ ಹಂತ ಹಂತವಾಗಿ ಬೆಳೆದು ಆಗರ್ಭ ಶ್ರೀಮಂತನಾಗುತ್ತಾನೆ. ಆದರೆ ದೇವರ ದುಡ್ಡನ್ನು ಹಿಂದಿರಿಗಿಸುವ ಯೋಚನೆಯನ್ನೂ ಮಾಡುವುದಿಲ್ಲ. ಹಣ ವಸೂಲಿಗಾಗಿ ಶ್ರೀಕೃಷ್ಣ ಧರೆಗಿಳಿದು ಬರುತ್ತಾನೆ. ಪ್ರತೀ ಹಂತದಲ್ಲೂ ಪ್ರತ್ಯಕ್ಷನಾಗಿ ತನಗೆ ಸೇರಿದ 51ರೂ. ಯಾವಾಗ ಹಿಂತಿರುಗಿಸುವೆ ಎಂದು ಕೇಳುತ್ತಿರುತ್ತಾನೆ. ಆದರೆ ನಾಸ್ತಿಕ ಅಷ್ಟೈಶ್ವರ್ಯಗಳನ್ನು ತೊಟ್ಟಿರುವ ನಿನಗ್ಯಾಕೆ ಈ ಅಲ್ಪ ಹಣದ ಚಿಂತೆ ಎಂದು ಪರಿಹಾಸ್ಯ ಮಾಡುತ್ತಾನೆ. ಹೀಗಿರುವಾಗ ಒಮ್ಮೆ ತನ್ನ ಡ್ರೈವರ್ ಮಗನ ಸ್ಕೂಲ್ ಫೀಸ್‌ಗಾಗಿ ಹಣ ನೀಡಿ ಆತನ ಮಗನ ವಿದ್ಯಾಭ್ಯಾಸಕ್ಕೆ ಸಹಕರಿಸುತ್ತಾನೆ. ಹಣ ಬೆಳೆದಂತೆ ಆರೋಗ್ಯ ಸಮಸ್ಯೆಗಳು ಬೆಳೆಯುತ್ತಾ ಹೋಗುತ್ತಿರುವಾಗ ಆಯಾಸಗೊಂಡ ಆತ ತನ್ನೆದುರು ಬಂದ ಶ್ರೀ ಕೃಷ್ಣನಿಗೆ ಇನ್ನೂ ನಿನಗೆ ನಿನ್ನ ಸಾಲದ ಯೋಚನೆ ಹೋಗಿಲ್ಲವೇ? ಎಂದು ಕೇಳಿದಾಗ – ಶ್ರೀ ಕೃಷ್ಣನು ನನಗೆ ಬರಬೇಕಿದ್ದ ಹಣ ಬಡ್ಡಿ ಸಮೇತ ಬಂದು ಸೇರಿತು ಇನ್ನು ಮುಂದೆ ನಾನು ನಿನ್ನ ಎದುರು ಕಾಣಿಸಿಕೊಳ್ಳುವುದಿಲ್ಲ ಎಂದಾಗ ಚಕಿತಗೊಂಡ ಶ್ರೀಮಂತ ಹೇಗೆಂದು ಪ್ರಶ್ನಿಸುತ್ತಾನೆ. ಆಗ ಶ್ರೀ ಕೃಷ್ಣನು ಯಾವಾಗ ನೀನು ನಿನ್ನ ಡ್ರೈವರ್ ಮಗನ ವಿದ್ಯಾಭ್ಯಾಸಕ್ಕೆ ಸಹಾಯ ಮಾಡಿದೆಯೋ ಅಂದೇ ನನ್ನ ಹಣ ನನಗೆ ಸೇರಿತು, ನಿನ್ನ ಕರ್ಮಗಳ ಸಾಲಿಗೆ ಒಂದು ಪುಣ್ಯ ಫಲ ಜಮಾವಾಗಿದೆ. ವಿದ್ಯಾದಾನವು ಶ್ರೇಷ್ಠ ದಾನಗಳಲ್ಲೊಂದು. ನಿನ್ನ ಸಂಪಾದನೆಯ ಮಾಪನ ನಿನ್ನ ಹಣದಿಂದಲ್ಲ ನಿನ್ನ ಕರ್ಮದ ಫಲಗಳಿಂದಾಗುತ್ತದೆ ಎಂಬುದನ್ನು ಮನದಟ್ಟು ಮಾಡುತ್ತಾನೆ. ಇದೇ ಜೀವನದ ಸಾರ್ಥಕತೆ, ನಿಜವಾದ ಸಂತೋಷ.

ಜೀವನದ ಪ್ರತಿಯೊಂದು ಅನುಭವವೂ ಒಂದೊಂದು ಅಮೂಲ್ಯ ಪಾಠವನ್ನು ಕಲಿಸುತ್ತದೆ. ಈ ಜೀವನ ತುಂಬಾ ಆಕಸ್ಮಿಕ, ಅನಿರೀಕ್ಷಿತ. ಇರುವಷ್ಟು ದಿನ ಪ್ರೀತಿ,

ಸಾಮರಸ್ಯದಿಂದ, ಆನಂದದಿಂದ ಜೀವಿಸೋಣ. ನಮ್ಮೊಂದಿಗಿರುವ ಸಂಬಂಧಗಳಿಗೆ ಸ್ವಲ್ಪ ಸಮಯ ಕೊಟ್ಟು ಅವರ ಭಾವನೆಗಳನ್ನು ಆದರಿಸೋಣ. ಈ ಯಾಂತ್ರಿಕ ಜೀವನದಲ್ಲಿ ಕೇವಲ ಹಣ, ಅಂತಸ್ತು, ಉದ್ಯೋಗ, ಭವಿಷ್ಯ, ಅಹಂಕಾರ, ಸ್ವಾಭಿಮಾನಗಳನ್ನೆಲ್ಲಾ ಬದಿಗೊತ್ತಿ ನಮ್ಮವರೊಂದಿಗೂ ಸ್ವಲ್ಪ ಕಾಲಕಳೆಯೋಣ. ವಯಸ್ಸಾದ ತಂದೆ ತಾಯಿಯರಿಗೆ ಬೇಕಾಗಿರುವುದು ಕೇವಲ ಸಮಯ. ಹೆಂಡತಿ ಮಕ್ಕಳೊಂದಿಗೆ ಒಂದಿಷ್ಟು ಮಾತು, ಆಟ, ಪಾಠ, ಪ್ರೀತಿ, ಜಗಳ, ಒಡನಾಟ, ಸ್ನೇಹ ಸಂಬಂಧಗಳೊಂದಿಗೆ ಒಂದಿಷ್ಟು ಹರಟೆ, ಕಾಲಹರಣ. ಇವುಗಳೂ ಜೀವನದ ಒಂದು ಭಾಗವೇ ಎಂಬುದನ್ನು ಮರೆಯದಿರಿ.

ಜೀವನ ಮತ್ತು ಉದ್ಯೋಗ ಇವೆರಡರ ಸಮತೋಲನದ ಬಗ್ಗೆ ರತನ್ ಟಾಟಾರವರು ಬಹಳ ಸೊಗಸಾಗಿ ಹೇಳುತ್ತಾರೆ – ಕೇವಲ ರ್‍ಯಾಂಕ್, ಪ್ರಮೋಷನ್, ಬ್ಯಾಂಕ್ ಬ್ಯಾಲೆನ್ಸ್ ಇವುಗಳಷ್ಟೇ ನಮ್ಮ ಯಶಸ್ಸಿನ ಗುರಿಯಾಗಿಲ್ಲ. ನಿಜವಾದ ಯಶಸ್ಸು ಸಿಗುವುದು ಇವುಗಳೊಂದಿಗೆ ನಮ್ಮ ವೈಯಕ್ತಿಕ ಜೀವನ, ಉತ್ತಮ ಆರೋಗ್ಯ, ಸಂಬಂಧಗಳು, ಮಾನಸಿಕ ನೆಮ್ಮದಿ ಎಲ್ಲವೂ ಸರಿಸಮವಾಗಿರಬೇಕು. ಸಂಬಂಧಗಳು ಬಿರುಕುಗೊಂಡಿರುವಾಗ ಉದ್ಯೋಗದಲ್ಲಿ ಸಿಗುವ ಪ್ರಮೋಷನ್ ಸಹ ಖುಷಿ ಕೊಡುವುದಿಲ್ಲ. ಆರೋಗ್ಯವೇ ಸರಿಯಿಲ್ಲದಾಗ ಐಷಾರಾಮಿ ಕಾರಿನ ಪ್ರಯಾಣವೂ ಮುದ ನೀಡುವುದಿಲ್ಲ. ಮಾನಸಿಕ ನೆಮ್ಮದಿ ಇಲ್ಲದಾಗ ಯಾವ ಕೆಲಸವೂ ತೃಪ್ತಿ ನೀಡುವುದಿಲ್ಲ. ಜೀವನ ತುಂಬಾ ಕ್ಷಣಿಕ ಹಾಗೂ ಅತೀ ಸುಂದರವಾಗಿದೆ. ಈ ಕ್ಷಣಗಳನ್ನು ಒತ್ತಡದಲ್ಲಿ, ದ್ವೇಷ, ಅಸೂಯೆ, ಅಹಂಕಾರಗಳಲ್ಲಿ ಯಾಕೆ ಕಳೆಯಬೇಕು? ಬಿಡುವು ಮಾಡಿಕೊಂಡು ನಿಮ್ಮವರೊಂದಿಗೆ ಸಮಯ ಕಳೆಯಿರಿ. ಎಲ್ಲರನ್ನೂ ತಮ್ಮವರೆಂದು ಭಾವಿಸಿ, ನಿಷ್ಕಲ್ಮಶ ನಗು, ಪ್ರೀತಿ ಹಂಚಿ ಎಲ್ಲರೊಳಗೊಂದಾಗಿ ಬದುಕಿ.

## ಕೋಮು ಗಲಭೆಯಲ್ಲಿ ಹತ್ಯೆಯಾದ ದಿ. ವಿಶ್ವನಾಥ ಶೆಟ್ಟಿ ಅವರ ಕುಟುಂಬಕ್ಕೆ ಬೆಂಗಳೂರು ಬಂಟರ ಸಂಘದ ವತಿಯಿಂದ ಒಂದು ಲಕ್ಷ ರೂ.ಗಳ ಧನಸಹಾಯ

2015ರಲ್ಲಿ ನಡೆದ ಕೋಮು ಗಲಭೆಯಲ್ಲಿ ಹತ್ಯೆಯಾದ ದಿ. ವಿಶ್ವನಾಥ ಶೆಟ್ಟಿ ಅವರ ಕುಟುಂಬಕ್ಕೆ ಬೆಂಗಳೂರು ಬಂಟರ ಸಂಘದ ವತಿಯಿಂದ ಒಂದು ಲಕ್ಷ ರೂ.ಗಳ ಸಹಾಯಧನ ವಿತರಿಸಲಾಯಿತು. ತೀರಾ ಸಂಕಷ್ಟದಲ್ಲಿರುವ ಮೃತ ವಿಶ್ವನಾಥ್ ಶೆಟ್ಟಿಯವರ ತಾಯಿಯವರಿಗೆ ರೂ. 25000/– ಹಾಗೂ ಪುತ್ರ ಯಶಸ್ ಇವರ ವಿದ್ಯಾಭ್ಯಾಸಕ್ಕೆ ರೂ.75000/– ಸೇರಿದಂತೆ ಒಟ್ಟು ಒಂದು ಲಕ್ಷ ರೂ.ಗಳ ಚೆಕ್‌ನ್ನು ಬೆಂಗಳೂರು ಬಂಟರ ಸಂಘದ ಅಧ್ಯಕ್ಷರಾದ ಶ್ರೀ ಆರ್. ಉಪೇಂದ್ರ ಶೆಟ್ಟಿ ಹಾಗೂ ಗೌರವ ಕಾರ್ಯದರ್ಶಿ ಶ್ರೀ ಮಧುಕರ ಎಮ್. ಶೆಟ್ಟಿಯವರು ಮೃತರ ಮನೆಗೆ ಭೇಟಿ ನೀಡಿ ಹಸ್ತಾಂತರಿಸಿದರು.



ಈ ಸಂದರ್ಭದಲ್ಲಿ ಸ್ಥಳೀಯ ಬಂಟರ ಸಂಘದ ಅಧ್ಯಕ್ಷರಾದ ಶ್ರೀ ಸುಬ್ರಮಣ್ಯ ಶೆಟ್ಟಿ, ಗೌರವಾಧ್ಯಕ್ಷ ಡಾ. ಮೋಹನ್ ಶೆಟ್ಟಿ, ಹೇಮಂತ್ ಶೆಟ್ಟಿ, ಸುರೇಶ್ ಶೆಟ್ಟಿ ಮತ್ತಿತರರು ಹಾಜರಿದ್ದರು.

ಬೆಂಗಳೂರು ಬಂಟರ ಸಂಘದ ಸಾಮಾಜಿಕ ಕಳಕಳಿಗೆ ಸ್ಥಳೀಯರಿಂದ ಶ್ಲಾಘನೆ ವ್ಯಕ್ತವಾಯಿತು.

# ಬಂಟರ ಸಂಘ ಬೆಂಗಳೂರು

## ಸಮಾಜ ಸೇವಾ ಸಮಿತಿ ಮತ್ತು ಸೇವಾದಳ ಪ್ರಸ್ತುತಿ


## "ಸೇವಾ ಚೇತನ–2 – 2022"

**ದಿನಾಂಕ 13.03.2022**

(ಕೋವಿಡ್ ನಿಯಮಾವಳಿಯಿಂದಾಗಿ ದಿನಾಂಕ 20–02–2022 ರಂದು ಹಮ್ಮಿಕೊಂಡಿದ್ದ ಸೇವಾ ಚೇತನ–2 ಕಾರ್ಯಕ್ರಮವನ್ನು ದಿನಾಂಕ 13–03–2022ರಂದು ಆಯೋಜಿಸಲು ತೀರ್ಮಾನಿಸಲಾಗಿದೆ.)

ಸಮಾಜ ಸೇವಾ ಸಮಿತಿ ಮತ್ತು ಸೇವಾದಳ ತನ್ನ ಕಾರ್ಯಾವಧಿಯಲ್ಲಿ ಹಲವಾರು ಸಾಮಾಜಿಕ ಕಾರ್ಯಗಳನ್ನು ಹಮ್ಮಿಗೊಂಡು ಯಶಸ್ವಿಯಾಗಿ ಪೂರೈಸಿ ಸಾವಿರಾರು ಸಮಾಜ ಬಾಂಧವರಿಗೆ ನೆರವಾಗಿದೆ. ದಿನಾಂಕ 13.03.2022, ಭಾನುವಾರ ಬೆಳಿಗ್ಗೆ 8.00 ರಿಂದ ನಡೆಯಲಿರುವ **"ಸೇವಾಚೇತನ–2– 2022"** ಸೇವಾ ಕಾರ್ಯಕ್ರಮವು ದಿನಪೂರ್ತಿ ನಡೆಯಲಿದೆ.

### "ಸೇವಾಚೇತನ–2–22" ಕಾರ್ಯಕ್ರಮದ ವಿವರಗಳು




- ಬೆಂಗಳೂರಿನ ವಿವಿಧ ಆಸ್ಪತ್ರೆಗಳ ಸಹಯೋಗದೊಂದಿಗೆ ಉಚಿತ ಆರೋಗ್ಯ ತಪಾಸಣೆ ಮತ್ತು ಸರಕಾರದ ವಿವಿಧ ಯೋಜನೆಯಡಿ ಉಚಿತ ಶಸ್ತ್ರಚಿಕಿತ್ಸೆ.
  - **ನಾರಾಯಣ ನೇತ್ರಾಲಯ**ದ ಸಹಯೋಗದೊಂದಿಗೆ ಉಚಿತ ನೇತ್ರ ತಪಾಸಣಾ ಶಿಬಿರ ಮತ್ತು ನೇತ್ರದಾನದ ನೋಂದಾವಣೆ ಕಾರ್ಯಕ್ರಮ ಮತ್ತು **CGHS** ದರ ಪಟ್ಟಿಯಂತೆ ಚಿಕಿತ್ಸೆ ನೀಡುವ ಬಗ್ಗೆ ಒಡಂಬಡಿಕೆ ನವೀಕರಣ ಮತ್ತು ಹಸ್ತಾಂತರ.
  - **ಮಹಾವೀರ್ ಜೈನ್ ಆಸ್ಪತ್ರೆ:–** ಹೃದಯ ಸಂಬಂಧಿ ಖಾಯಿಲೆಗಳ ಉಚಿತ ತಪಾಸಣೆ ಮತ್ತು ಸರಕಾರದ ವಿವಿಧ ಯೋಜನೆಯ ಫಲಾನುಭವಿಗಳಿಗೆ ಮಹಾವೀರ್ ಜೈನ್ ಆಸ್ಪತ್ರೆ ಸಹಯೋಗದೊಂದಿಗೆ ಉಚಿತ ಶಸ್ತ್ರಚಿಕಿತ್ಸೆ ಮತ್ತು **ಉಚಿತ ಕೃತಕ ಕೈ ಮತ್ತು ಕಾಲು ಜೋಡಣೆ** ಮತ್ತು **CGHS** ದರ ಪಟ್ಟಿಯಂತೆ ಚಿಕಿತ್ಸೆ ನೀಡುವ ಬಗ್ಗೆ ಒಡಂಬಡಿಕೆ ಮತ್ತು ಹಸ್ತಾಂತರ.
  - **ಫೋರ್ಟಿಸ್ ಹಾಸ್ಪಿಟಲ್ ನಾಗರಬಾವಿ** ಇವರ ಸಹಯೋಗದೊಂದಿಗೆ ಉಚಿತ ಹೃದಯ ತಪಾಸಣೆ (ECG, ECHO & Consultation), ಮೂಳೆ ತಜ್ಞರಿಂದ ಸಲಹೆ ಹಾಗೂ BMD Test, ಆರೋಗ್ಯ ತಪಾಸಣೆ ಮತ್ತು ಮಧುಮೇಹ ಪರೀಕ್ಷೆ. (Sugar Test).
  - **ಮಾನಸ Cochlear Implant ಸೆಂಟರಿನ ಡಾ। ವಾಸಂತಿ ಆನಂದ ಮತ್ತು ವೈದ್ಯರ ತಂಡದ** ಸಹಯೋಗದೊಂದಿಗೆ ಬೆಂಗಳೂರಿನ ವಿವಿಧ ಆಸ್ಪತ್ರೆಗಳಲ್ಲಿ 5 ವರ್ಷದ ಒಳಗಿನ ಕಿವುಡ ಮತ್ತು ಮೂಗ ಮಕ್ಕಳಿಗೆ ಸರಕಾರದ ವಿವಿಧ ಯೋಜನೆಯಡಿ ಉಚಿತ cochlear ಸಲಕರಣೆಗಳ ಅಳವಡಿಕೆ ಹಾಗೂ ಅರ್ಹ ಹತ್ತು ಮಕ್ಕಳ ದತ್ತು ಸ್ವೀಕಾರ ಮತ್ತು ಉಚಿತ ಶಸ್ತ್ರ ಚಿಕಿತ್ಸೆ.
  - **ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ** ಇವರ ಸಹಯೋಗದೊಂದಿಗೆ ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ ಮತ್ತು

ಸರಕಾರದ ಯೋಜನೆಯಡಿ ಉಚಿತ ಚಿಕಿತ್ಸೆ ಮತ್ತು ರಕ್ತ ಪರೀಕ್ಷೆ ಹಾಗೂ ಕಾನ್ಸರ್ ಸಂಬಂಧಪಟ್ಟ ಪರೀಕ್ಷೆ ಮತ್ತು ಜಾಗೃತಿ ಕಾರ್ಯಕ್ರಮ.

- **ಕರ್ನಾಟಕ ಕ್ಯಾನ್ಸರ್ ಆಸ್ಪತ್ರೆ**ಯಿಂದ ಕಾನ್ಸರ್ ಸಂಬಂಧ ಪಟ್ಟ ಉಚಿತ ಪರೀಕ್ಷೆ ನಡೆಯಲಿದೆ.
- **ವಾಣಿ ವಿಲಾಸ್ ಸರ್ಕಾರಿ ಆಸ್ಪತ್ರೆ ಬೆಂಗಳೂರು :** ನುರಿತ ತಜ್ಞ ವೈದ್ಯರ ಸಹಯೋಗದೊಂದಿಗೆ ಉಚಿತ ಪ್ರಸೂತಿ ಮತ್ತು ಸ್ತ್ರೀರೋಗ ಹಾಗೂ ಮಕ್ಕಳ ಪರೀಕ್ಷೆ ಮತ್ತು ಚಿಕಿತ್ಸೆ.
- **ನಾರಾಯಣ ಹೃದಯಾಲಯ :** ಹೃದಯ ಸಂಬಂಧಿ ಖಾಯಿಲೆಗಳ ಉಚಿತ ತಪಾಸಣೆ ಹಾಗೂ ನೆತ್ತರ ನೆರವು ಕಾರ್ಯಕ್ರಮದ ಅಡಿಯಲ್ಲಿ ರಕ್ತ ಪರೀಕ್ಷೆ ಮತ್ತು ಸಂಗ್ರಹ.
- **ಪ್ರತಿಷ್ಠಿತ ಆಸ್ಪತ್ರೆಗಳಾದ Premier Sanjeevini Hospital, Spine Care and Ortho Care Hospital, Essential Hospital, Mamatha Hospital, Isha Diagnostic, City Hospital,** ಮತ್ತು ಇತರ ಆಸ್ಪತ್ರೆಗಳಿಂದ ತಜ್ಞರು ಭಾಗವಹಿಸುವರು.
- **ಬಿಬಿಎಂಪಿ ಮತ್ತು ಆರೋಗ್ಯ ಇಲಾಖೆ** ಸಹಯೋಗದೊಂದಿಗೆ ಉಚಿತ ಕೊರೋನಾ ಲಸಿಕಾ ಅಭಿಯಾನ.

- ಆರ್ಥಿಕವಾಗಿ ಹಿಂದುಳಿದ ಸಮಾಜ ಬಾಂಧವರಿಗೆ ಆರೋಗ್ಯ ಸೇವೆಯನ್ನು ಒದಗಿಸಲು ಪ್ರತಿಷ್ಠಿತ ಆಸ್ಪತ್ರೆಗಳೊಂದಿಗೆ ಚಾಲ್ತಿಯಲ್ಲಿರುವ ಒಡಂಬಡಿಕೆ ನವೀಕರಣ ಮತ್ತು CGHS ದರದಲ್ಲಿ ಚಿಕಿತ್ಸೆ ನೀಡುವ ಒಡಂಬಡಿಕೆಗೆ ಇನ್ನಷ್ಟು ಆಸ್ಪತ್ರೆಗಳಿಗೆ ವಿಸ್ತರಣೆ.




**'ದಾನಗಳಲ್ಲಿ ಮಹಾದಾನ'**

- **ರಕ್ತದಾನ, ಅನ್ನದಾನ, ನೇತ್ರದಾನ ದಿನಪೂರ್ತಿ ನಡೆಯಲಿದೆ.**
- **ಹಿರಿಯ ನಾಗರೀಕರ ಚೀಟಿ, ಪಾನ್ ಮತ್ತು ಆಧಾರ್‌ಕಾರ್ಡ್ ಅಭಿಯಾನ**




ಸಮಾಜದ ಬಾಂಧವರಿಗೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಅನೇಕ ಸೌಲಭ್ಯಗಳ ನೋಂದಣೆ ಮತ್ತು ಸ್ಥಳದಲ್ಲೆ ಗುರುತಿನ ಚೀಟಿ (Identity Card) ವಿತರಣೆ ನಡೆಯುವುದು. ನಾಗರೀಕರಿಗೆ ಸರಕಾರದಿಂದ ದೊರೆಯುವ ಸೌಲಭ್ಯಗಳನ್ನು ಪಡೆಯುವ ನಿಟ್ಟಿನಲ್ಲಿ ಹಿರಿಯ ನಾಗರೀಕರ ಚೀಟಿಗಳನ್ನು ಮಾಡಿಕೊಡುವುದು. ಜೊತೆಗೆ ಆಧಾರ್ ಮತ್ತು ಪಾನ್‌ಕಾರ್ಡ್ ಅಭಿಯಾನ.



- **ವಿವಿಧ ಮಾಹಿತಿ ಕಾರ್ಯಾಗಾರ** – ಸಂಘದ ಸದಸ್ಯರು ಹಾಗೂ ವಿದ್ಯಾರ್ಥಿಗಳಿಗೆ ಅನುಕೂಲಕರವಾಗುವಂತಹ ವಿವಿಧ ಮಾಹಿತಿ ಕಾರ್ಯಾಗಾರಗಳು.
- **ಜೀವನಕ್ಕಾಗಿ ಕಾಮಧೇನು** – ಅಶಕ್ತ ಬಂಟ ಕುಟುಂಬಗಳನ್ನು ಗುರುತಿಸಿ ಅವರ ಜೀವನೋಪಾಯಕ್ಕಾಗಿ ಪಶು ಸಂಗೋಪನೆಗೆ ಜೀವನಕ್ಕಾಗಿ ಕಾಮಧೇನು ಅಡಿಯಲ್ಲಿ ಧನ ಸಹಾಯ ಮಾಡಲಾಗುವುದು.
- ಸೇವಾ ಕ್ಷೇತ್ರದಲ್ಲಿ ಗಣನೀಯ ಸಾಧನೆಗೈದವರಿಗೆ **"ಸೇವಾ ಚೇತನ ಪ್ರಶಸ್ತಿ"** ಪ್ರಧಾನ ಸಮಾರಂಭ

- ಬಂಟರ ಸಂಘದಲ್ಲಿ ಆಧಾರ್, ಪಾನ್ ಕಾರ್ಡ್, ಹಿರಿಯ ನಾಗರಿಕರ ಚೀಟಿ, ಆಹಾರ ಪರವಾನಿಗೆ ಸೇರಿದಂತೆ ವಿವಿಧ ಸೌಲಭ್ಯಗಳನ್ನು ಸಮಾಜ ಬಾಂಧವರಿಗೆ ನೀಡುವ ನಿಟ್ಟಿನಲ್ಲಿ ಶಾಶ್ವತ CSC Counter ಉದ್ಘಾಟನೆ.
- ಕರಾವಳಿಯ ಪ್ರಸಿದ್ಧ ಕಲಾವಿದರಿಂದ ಯಕ್ಷಗಾನ ಪ್ರದರ್ಶನ
- ಸಂಘದ ಸದಸ್ಯರ ಮಕ್ಕಳಿಂದ ಮತ್ತು ಪರಿಣಿತ ತಂಡದಿಂದ ಹುಲಿ ಕುಣಿತ ಪ್ರದರ್ಶನ
- ಸಾಂಪ್ರದಾಯಿಕ ಶೈಲಿಯ ಸಿಗಿಮೋ ನೃತ್ಯ (ಹೋಳಿ ಕುಣಿತ)–ಕೆಂಜೂರು–ಕೊಕ್ಕರ್ಣೆ ಭಾಗದ ಕಲಾವಿದರಿಂದ.
- ಪ್ರಸಿದ್ಧ ಹಾಡುಗಾರರು ಮತ್ತು ಸಂಘದ ಸದಸ್ಯರಿಂದ ಸಂಗೀತ ರಸಮಂಜರಿ ಸೇರಿದಂತೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು (ದಿನಪೂರ್ತಿ ನಡೆಯಲಿದೆ)
- ಕರಾವಳಿಯ ಸಾಂಪ್ರದಾಯಿಕ ತಿಂಡಿ ತಿನಿಸುಗಳ ಮಳಿಗೆ.
- ಇಂದಿನ ಯುವಪೀಳಿಗೆಗೆ ಔಷಧಿ ಸಸ್ಯಗಳ ಪರಿಚಯ ಮತ್ತು ನೇರ ಪ್ರದರ್ಶನ.
- ವಿದೇಶದಲ್ಲಿ ವ್ಯಾಸಂಗ ಮಾಡಲು ಆಸಕ್ತ ಅಭ್ಯರ್ಥಿಗಳಿಗೆ ಅಲ್ಲಿನ ವಿಶ್ವವಿದ್ಯಾನಿಲಯಗಳ ಮತ್ತು ವಿದ್ಯಾರ್ಥಿವೇತನದ ಬಗ್ಗೆ ಮಾಹಿತಿ.
- ಬಂಧುಗಳೇ, ಬೆಂಗಳೂರು ಬಂಟರ ಸಂಘದ ಸದಸ್ಯರು ಹಾಗೂ ಸೇವಾದಳದ ಸದಸ್ಯರಿಂದ ಬೆಳಿಗ್ಗೆ 9 ಗಂಟೆಗೆ ಪ್ರಾರಂಭವಾಗಿ ವಿಜಯನಗರದ ಸುತ್ತಮುತ್ತ ಬಂಟರ ಸಂಘದ ಬಾವುಟವನ್ನು ಹಿಡಿದು ಜಾಥದ ಮುಖಾಂತರ ಪಥ ಸಂಚಲನ ನಡೆಯುವುದು. ಈ ಕಾರ್ಯಕ್ರಮಕ್ಕೆ ಅತೀ ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯರು ಭಾಗವಹಿಸಿ ಯಶಸ್ವಿಗೊಳಿಸೋಣ.
- ಕೋವಿಡ್ ಸಮಯದಲ್ಲಿ ಅತೀ ಹೆಚ್ಚು ಸಮಾಜಕ್ಕೆ ಸೇವೆಯನ್ನು ನೀಡಿದ ಬಂಟ್ಸ್ ಸೇವಾದಳದ ಘಟಕದ ನಾಯಕರಿಗೆ ಅಭಿನಂದನಾ ಪತ್ರ ವಿತರಣೆ.

ಅನೇಕ ಸಾಮಾಜಿಕ ಮತ್ತು ಸಾಂಸ್ಕೃತಿಕ ವೆಬಿನಾರ್ ಕಾರ್ಯಕ್ರಮಗಳು ಬೆಳಿಗ್ಗೆ 9 ಗಂಟೆಯಿಂದ ನಡೆಯಲಿದೆ. ಎಲ್ಲಾ ಸಾಮಾಜಿಕ ಸೇವಾ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಆಯೋಜನೆಗಳ ಪ್ರಯೋಜನವನ್ನು ನಮ್ಮೆಲ್ಲ ಸಮಾಜ ಬಾಂಧವರಿಗೆ ತಲುಪಿಸೋಣ.

**ಮಧುಕರ ಎಂ. ಶೆಟ್ಟಿ**
ಗೌರವ ಕಾರ್ಯದರ್ಶಿ

**ಆರ್. ಉಪೇಂದ್ರ ಶೆಟ್ಟಿ**
ಅಧ್ಯಕ್ಷರು

**ಉಮೇಶ್ ಶೆಟ್ಟಿ ಎಂ. ಬಿ**
ಚೇರ್‌ಪರ್ಸನ್, ಸಮಾಜ ಸೇವಾ ಸಮಿತಿ ಮತ್ತು ಸೇವಾದಳ


**ಅಜಿತ್ ಶೆಟ್ಟಿ ಉಳ್ತೂರು**
ಸಂಚಾಲಕರು, ಸಮಾಜ ಸೇವಾ ಸಮಿತಿ

**ಭಾಸ್ಕರ್ ಶೆಟ್ಟಿ**
ಸಂಚಾಲಕರು, ಸೇವಾದಳ

**ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು, ಸಮಾಜ ಸೇವಾ ಸಮಿತಿ ಹಾಗೂ ಸೇವಾದಳದ ಸದಸ್ಯರು**

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ – 9845025921 / 99162 32028 / 99864 33058**

# ಶ್ರದ್ಧಾಂಜಲಿ



**ಶ್ರೀ ನರೇಂದ್ರನಾಥ ಶೆಟ್ಟಿ ಕೆ.**
ಸದಸ್ಯತ್ವ ಸಂಖ್ಯೆ: CL011793

ಪಾವೂರು ಶ್ರೀ ನರೇಂದ್ರನಾಥ ಶೆಟ್ಟಿ ಕೆ.ಯವರು ದಿನಾಂಕ 06.02.2022ರಂದು ತಮ್ಮ 59ನೇ ವಯಸ್ಸಿನಲ್ಲಿ ನಿಧನರಾದರು. ಬೆಂಗಳೂರಿನಲ್ಲಿ ಉದ್ಯಮವನ್ನು ನಡೆಸುತ್ತಿದ್ದ ಇವರು ತಮ್ಮ ಪತ್ನಿ ಸೋಮೇಶ್ವರ ಉಚ್ಚಿಲ ಶ್ರೀಮತಿ ಸರಿತಾ ಎನ್. ಶೆಟ್ಟಿ, ಓರ್ವ ಪುತ್ರಿ, ಇಬ್ಬರು ಸಹೋದರರು, ನಾಲ್ವರು ಸಹೋದರಿಯರು ಹಾಗೂ ಬಂಧು–ಬಳಗವನ್ನು ಅಗಲಿರುತ್ತಾರೆ. ಸಂಘದ ಸರ್ವ ಸದಸ್ಯರು ಇವರ ಆತ್ಮಕ್ಕೆ ಚಿರಶಾಂತಿ ಕೋರಿ ಸಂತಾಪ ಸೂಚಿಸಿರುತ್ತಾರೆ.

ದಿ. ಮುಲ್ಕಿ ಸುಂದರರಾಮ ಶೆಟ್ಟಿ ಮತ್ತು ದಿ. ಕುಸುಮಾವತಿ ಶೆಟ್ಟಿಯವರ ಪುತ್ರಿ ಶ್ರೀಮತಿ ವೃಂದಾ ಪಿ. ಪೂಂಜಾರವರು ದಿನಾಂಕ 09.02.2022ರಂದು ತಮ್ಮ 79ನೇ ವಯಸ್ಸಿನಲ್ಲಿ ನಿಧನರಾದರು. ಇವರು ತಮ್ಮ ಪತಿ ಉದ್ಯಮಿ ಡಾ. ಪ್ರೇಮನಾಥ ಪೂಂಜಾ ಬಿ.ಟಿ, ಓರ್ವ ಪುತ್ರ, ಓರ್ವ ಪುತ್ರಿ, ಇಬ್ಬರು ಸಹೋದರರು, ಓರ್ವ ಸಹೋದರಿ, ಓರ್ವ ಮೊಮ್ಮಗು ಹಾಗೂ ಬಂಧು–ಬಳಗವನ್ನು ಅಗಲಿರುತ್ತಾರೆ. ಸಂಘದ ಸರ್ವ ಸದಸ್ಯರು ಇವರ ಆತ್ಮಕ್ಕೆ ಚಿರಶಾಂತಿ ಕೋರಿ ಸಂತಾಪ ಸೂಚಿಸಿರುತ್ತಾರೆ.



**ಶ್ರೀಮತಿ ವೃಂದಾ ಪೂಂಜಾ ಪಿ.**
ಸದಸ್ಯತ್ವ ಸಂಖ್ಯೆ: CL000881



**ಶ್ರೀ ಚಂದ್ರಶೇಖರ್ ಶೆಟ್ಟಿ ಬಿ.**
ಸದಸ್ಯತ್ವ ಸಂಖ್ಯೆ: CL001736

ನಿವೃತ್ತ ಬ್ರಿಗೇಡಿಯರ್ ಬಂಟ್ವಾಳ ಶ್ರೀ ಬಿ. ಚಂದ್ರಶೇಖರ್ ಶೆಟ್ಟಿರವರು ದಿನಾಂಕ 22.02.2022ರಂದು ತಮ್ಮ 79ನೇ ವಯಸ್ಸಿನಲ್ಲಿ ನಿಧನರಾದರು. ಇವರು ತಮ್ಮ ಪತ್ನಿ ನಚ್ಚ ಶ್ರೀಮತಿ ಭಾರತಿ ಸಿ. ಶೆಟ್ಟಿ, ಓರ್ವ ಪುತ್ರ, ಓರ್ವ ಪುತ್ರಿ, ಇಬ್ಬರು ಮೊಮ್ಮಕ್ಕಳು, ನಾಲ್ವರು ಸಹೋದರಿಯರು, ಓರ್ವ ಸಹೋದರ ಹಾಗೂ ಬಂಧು–ಬಳಗವನ್ನು ಅಗಲಿರುತ್ತಾರೆ. ಸಂಘದ ಸರ್ವ ಸದಸ್ಯರು ಇವರ ಆತ್ಮಕ್ಕೆ ಚಿರಶಾಂತಿ ಕೋರಿ ಸಂತಾಪ ಸೂಚಿಸಿರುತ್ತಾರೆ.

ಮಂಗಳೂರು ಮರವೂರುಬೀಡು ಶ್ರೀಮತಿ ಪ್ರತಿಭಾ ಎಸ್. ಶೆಟ್ಟಿಯವರು ದಿನಾಂಕ 01.03.2022ರಂದು ತಮ್ಮ 70ನೇ ವಯಸ್ಸಿನಲ್ಲಿ ನಿಧನರಾದರು. ಇವರು ತಮ್ಮ ಪತಿ ಶ್ರೀ ಸತ್ಯನಾರಾಯಣ ಶೆಟ್ಟಿ ಎಸ್., ಓರ್ವ ಪುತ್ರ, ಓರ್ವ ಪುತ್ರಿ, ನಾಲ್ವರು ಮೊಮ್ಮಕ್ಕಳು, ಮೂವರು ಸಹೋದರಿಯರು ಹಾಗೂ ಬಂಧು–ಬಳಗವನ್ನು ಅಗಲಿರುತ್ತಾರೆ. ಸಂಘದ ಸರ್ವ ಸದಸ್ಯರು ಇವರ ಆತ್ಮಕ್ಕೆ ಚಿರಶಾಂತಿ ಕೋರಿ ಸಂತಾಪ ಸೂಚಿಸಿರುತ್ತಾರೆ.



**ಶ್ರೀಮತಿ ಪ್ರತಿಭಾ ಎಸ್. ಶೆಟ್ಟಿ**
ಸದಸ್ಯತ್ವ ಸಂಖ್ಯೆ: CL004006

Creating life - long bonds
Since 19 Years

HOME FOR ALL

AVAIL THE BENEFITS OF
PMAY
Interest Subsidy Upto ₹ 2.67 lakh*
*Conditions Apply
PRADHAN MANTRI AWAS YOJANA



RERA Approved

Just Pay ₹ 50K
To Book your Dream Home.

Budget Flats 18 Lakhs Onwards

COST INCLUDING GST

SAI MATHA GARDEN
Surathkal, Mangaluru.

1 MATHA Emerald
2 MATHA Opal
3 MATHA Ruby
4 MATHA Diamond
5 MATHA Pearl
6 MATHA Crystal
7 MATHA Sapphire

NEAR TO BEACH & RAILWAY STATION
International Airport Road, Surathkal



MATHA Jyothi Residency
NH-66, Mukka



MATHA Sushiganga Residency
NH-66, Mulky

On Going Project in MUKKA & PADUBIDRI

Project Approved in all Nationalized Bank

LAND FOR SALE / PURCHASE IN UDUPI - MANGALORE

MATHA Builders & Developers
Developers Pvt. Ltd.

**Surathkal**: Thara Towers, 2nd Floor, International Airport Road, Surathkal, Mangaluru - 575 014.

**Mumbai**: Shop No. 8, Bldg. No. 1, New Venkateshwar Nagar, Cabin Road Bhayandar (E), Thane Dist - 401 105.

7259209966
9980711966

mathadevelopers108@gmail.com
www.mathadevelopers.com

CREDAI

7022481666
7259269966(Mumbai)


Best Investment with Assured Rental Return

ADVT.


SAKRA
WORLD HOSPITAL
JV by SECOM & TOYOTA TSUSHO, JAPAN
FOR HEART DISEASES, CHOOSE PREVENTION AS YOUR FIRST LINE OF DEFENSE
Heart diseases are a leading cause of death & disability, even in the young generation. There are many factors that can raise your risk of heart diseases. Some factors are uncontrollable like age, gender, race and family history but, there are many that you can control.
Preventive Measures
Eat a healthy diet
Manage stress
Get regular exercise
Don't smoke
Mantain a healthy weight
Limit alcohol
Control your blood pressure
Keep your cholesterol and triglyceride levels under control
For any heart related problem, book an appointment with our specialist
Dr. SREEKANTH SHETTY
Senior Consultant & Head - Interventional Cardiology
Timings: Monday to Saturday | 9 am - 5 pm
080 4969 4969 | www.sakraworldhospital.com

ADVT.

# ಬಂಟರ ಸಂಘ ಬೆಂಗಳೂರು
# BUNTS' SANGHA BANGALORE



# ಕ್ಲಾತ್ ಬ್ಯಾಂಕ್
# Cloth Bank





'ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ಕ್ರೀಡಾ ಮತ್ತು ಸಾಂಸ್ಕೃತಿಕ ದಿನಾಚರಣೆ'
ಸವಿನೆನಪಿಗಾಗಿ ಸಮರ್ಪಣೆ

ಮಾನ್ಯ ಸದಸ್ಯರೇ,

ಪ್ರತಿಯೊಬ್ಬರ ಜೀವನದಲ್ಲೂ 'ಮದುವೆ' ಎನ್ನುವುದು ಬಹಳ ಮಹತ್ವದ ಹಾಗೂ ಪ್ರಮುಖ ಘಟ್ಟ. ಮದುವೆ ಸಮಾರಂಭಗಳಲ್ಲಿ ಮದುಮಕ್ಕಳು ಧರಿಸುವ ಉಡುಗೆ-ತೊಡುಗೆಗಳಿಗೂ ಕೂಡ ಬಹಳ ಪ್ರಾಶಸ್ತ್ಯವಿದೆ. ಈ ಸಂದರ್ಭದಲ್ಲಿ ಒಳ್ಳೆಯ ಉಡುಪುಗಳನ್ನು ತೊಟ್ಟು ಸಂಭ್ರಮಿಸಬೇಕೆನ್ನುವುದು ಪ್ರತೀ ವಧೂ-ವರರ ಹಾಗೂ ಪೋಷಕರ ಸಹಜ ಆಶಯ.

ಆದರೆ, ಎಲ್ಲಾ ವರ್ಗದ ಜನರಿಗೆ ತಮ್ಮ ಮನಸ್ಸಿಗೊಪ್ಪುವ ಚಂದದ ಹಾಗೂ ಉತ್ತಮ ಗುಣಮಟ್ಟದ ಉಡುಪುಗಳನ್ನು ಖರೀದಿಸುವುದು ಆರ್ಥಿಕವಾಗಿ ಕಷ್ಟಸಾಧ್ಯ. ಇಂತಹ ಕುಟುಂಬಗಳಿಗೆ ನೆರವಾಗುವ ಉದ್ದೇಶದಿಂದ ಬೆಂಗಳೂರು ಬಂಟರ ಸಂಘದ ವತಿಯಿಂದ ಮದುವೆ ಸಮಾರಂಭಗಳಿಗೆ ವಿಶೇಷ ಉಡುಪುಗಳನ್ನು ಒದಗಿಸುವ 'ಕ್ಲಾತ್ ಬ್ಯಾಂಕ್' ಎನ್ನುವ ವಿನೂತನ ಪರಿಕಲ್ಪನೆಯನ್ನು ಪರಿಚಯಿಸಲಿದೆ.

ಹೆಚ್ಚಿನ ಮನೆಗಳಲ್ಲಿ ತಮ್ಮ ಕುಟುಂಬದ ಮದುವೆಯ ಪೋಷಾಕುಗಳಾದ ಕೋಟ್, ಪೈಜಾಮ ಜುಬ್ಬಾ, ಶೆರ್ವಾನಿ, ಪಂಚೆ, ಶರ್ಟ್, ಸೀರೆ, ಲೆಹೆಂಗಾ, ಗೌನ್ ಮುಂತಾದ ಉಡುಪುಗಳನ್ನು ಮದುವೆ ಅಥವಾ ಇನ್ನ್ಯಾವುದೇ ವಿಶೇಷ ಸಮಾರಂಭಗಳಲ್ಲಿ ಮಾತ್ರವೇ ಉಪಯೋಗಿಸಿ, ಮುಂದೆ ಅದನ್ನು ಯಾವುದೇ ಕಾರ್ಯಕ್ರಮಕ್ಕೆ ಬಳಸದೇ ಹಾಗೆಯೇ ಇಟ್ಟಿರುತ್ತಾರೆ. ಪ್ರಸ್ತುತ ಬಳಸದೇ ಸುಸ್ಥಿತಿಯಲ್ಲಿರುವ ಹಾಗೂ ತಮಗೆ ಬೇಡವೆನಿಸಿದ ಮದುವೆ ಸಮಾರಂಭಗಳಿಗೆ ಮದುಮಕ್ಕಳು ಉಪಯೋಗಿಸಬಹುದಾದ ಪೋಷಾಕುಗಳನ್ನು 'ಕ್ಲಾತ್ ಬ್ಯಾಂಕ್'ಗೆ ಕೊಡುಗೆಯಾಗಿ ತಾವು ನೀಡಿದಲ್ಲಿ ಅದನ್ನು ಸಂಗ್ರಹಿಸಿ ಆದ್ಯತೆಯ ಮೇರೆಗೆ ನಗರದ ಅಸುಪಾಸಿನ (ಕೊಳೆಗೇರಿ ಅಥವಾ ಇತರ ಪ್ರದೇಶ) ಎಲ್ಲಾ ಜನಾಂಗ ಹಾಗೂ ಧರ್ಮದ ಅರ್ಹ ಫಲಾನುಭವಿಗಳ ಕುಟುಂಬದ ಮದುವೆ, ಆರತಕ್ಷತೆ ಇತ್ಯಾದಿ ಸಮಾರಂಭಗಳಿಗೆ ಉಪಯೋಗಿಸಲು ಉಡುಗೊರೆ ರೂಪದಲ್ಲಿ ನೀಡಲಾಗುವುದು. ಸಂಘದ ಸದಸ್ಯರು ಹಾಗೂ ಸಾರ್ವಜನಿಕರಿಂದಲೂ ಮದುವೆ ಪೋಷಾಕುಗಳನ್ನು ದಾನವಾಗಿ ಪಡೆಯಲಾಗುವುದು. ಈ ಯೋಜನೆಗೆ ಹೊಸ ಬಟ್ಟೆಗಳನ್ನು ಸಹ ದೇಣಿಗೆಯಾಗಿ ನೀಡಬಹುದಾಗಿದೆ.

ಬನ್ನಿ, ಬೆಂಗಳೂರು ಬಂಟರ ಸಂಘದ ವಿನೂತನ ಸಮುದಾಯ ಸೇವೆಯಲ್ಲಿ ಕೈಜೋಡಿಸಿ.

ಮಧುಕರ ಎಂ. ಶೆಟ್ಟಿ
ಗೌರವ ಕಾರ್ಯದರ್ಶಿ

ಆರ್. ಉಪೇಂದ್ರ ಶೆಟ್ಟಿ
ಅಧ್ಯಕ್ಷರು

ಪದಾಧಿಕಾರಿಗಳು ಮತ್ತು ಕಾರ್ಯಕಾರಿ ಸಮಿತಿ ಸದಸ್ಯರು

ದೂರವಾಣಿ: **080-23399323/ 23399636/ 7022119739/ 6363514510**

ಆಸಕ್ತ ದಾನಿಗಳು ಸಂಘದ ಕಛೇರಿಗೆ ನೇರವಾಗಿ ಬಟ್ಟೆಗಳನ್ನು ತಲುಪಿಸಬಹುದಾಗಿದೆ. ದೂರವಾಣಿ ಮೂಲಕ ತಿಳಿಸಿದಲ್ಲಿ ಅಥವಾ ಮೊಬೈಲ್‌ಗೆ ಮಿಸ್ಡ್ ಕಾಲ್ ನೀಡಿದಲ್ಲಿ ತಮ್ಮನ್ನು ಸಂಪರ್ಕಿಸಿ ಬಟ್ಟೆಗಳನ್ನು ಪಡೆಯಲಾಗುವುದು.

ADVT

ಸ್ಥಾಪನೆ : 1997

# ವಿಜಯ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ

# Vijaya Pathina Souharda Sahakari Niyamitha

ನಂ. 5, ಎಸ್.ಜೆ. ಎಲಿಗೆನ್ಸ್, 4ನೇ ಮಹಡಿ, ಚಂದ್ರಲೇಔಟ್ ಮುಖ್ಯರಸ್ತೆ, ಇನ್‌ಕಮ್ ಟ್ಯಾಕ್ಸ್ ಲೇಔಟ್
ವಿಜಯನಗರ, ಬೆಂಗಳೂರು-560 040. ದೂರವಾಣಿ: 23393444 ಮೊಬೈಲ್ : 8722006082
E-mail: vijaya_souharda@yahoo.in, vijayasouharda@rediffmail.com

**ವಿಜಯ ಪತ್ತಿನ ಸೌಹಾರ್ದ ಸಹಕಾರಿ – ಪ್ರಗತಿ ಪಥದತ್ತ**

ಸಹಕಾರಿಯು ಸುಸ್ಥಿರ ಬೆಳವಣಿಗೆಯತ್ತ ಸಾಗುತ್ತಿದೆ. 25ರ ರಜತ ಸಂಭ್ರಮಕ್ಕೆ ಕಾಲಿಡುತ್ತಿದೆ. ನಿಶ್ಚಿತ ಠೇವಣಿಗಳಿಗೆ ಆಕರ್ಷಕ ಬಡ್ಡಿದರವನ್ನು ನೀಡಲಾಗುವುದು. ಷೇರುಗಳನ್ನು ಖರೀದಿಸಿ ಸಹಕಾರಿಯ ಸದಸ್ಯರಾಗುವ ಮೂಲಕ ವಿವಿಧ ಠೇವಣಿ, ಸಾಲ ಸೌಲಭ್ಯವನ್ನು ಪಡೆದುಕೊಳ್ಳಬಹುದು. ಪಿಗ್ಮಿ ಸಂಗ್ರಹಣಾ ವ್ಯವಸ್ಥೆ ಕಲ್ಪಿಸಲಾಗಿದೆ. ಇವುಗಳ ಸದುಪಯೋಗವನ್ನು ಎಲ್ಲರೂ ಪಡೆದುಕೊಳ್ಳುವಂತೆ ಕೋರಲಾಗಿದೆ.

**ಸಾಲಗಳು**

- ಜಾಮೀನು ಸಾಲ : ರೂ. 50,000/-
- ವಾಹನ ಸಾಲ : 1 ಲಕ್ಷದಿಂದ 10 ಲಕ್ಷ – 24 ತಿಂಗಳಿಂದ 36 ತಿಂಗಳವರೆಗೆ
- ವ್ಯಾಪಾರ ಸಾಲ : 1 ಲಕ್ಷದಿಂದ 20 ಲಕ್ಷ
- ಗೃಹ ನಿರ್ಮಾಣ ಸಾಲ : 1 ಲಕ್ಷದಿಂದ 20 ಲಕ್ಷ – 120 ತಿಂಗಳು

**ಸಾಲದ ಬಡ್ಡಿ ದರ : 1 ಲಕ್ಷದವರೆಗೆ 14%, 1 ಲಕ್ಷ ಮೇಲ್ಪಟ್ಟು – 13%**

**2016-17 ರಿಂದ ಕ್ರಮವಾಗಿ 15% ವಾರ್ಷಿಕ ಡಿವಿಡೆಂಡ್ ವಿತರಣೆ**
**ಪ್ರಗತಿಗೆ ಕೈ ಜೋಡಿಸಿ ಸಹಕಾರಿ ಕ್ಷೇತ್ರದಲ್ಲಿ ಅದ್ಭುತ ಸಾಧನೆಗೆ ಸಹಕರಿಸಿ**

**ವ್ಯವಹಾರದ ವೇಳೆ**

| | ಬೆಳಿಗ್ಗೆ | ಸಾಯಂಕಾಲ | ವಾರದ ರಜಾದಿನ |
|---|---|---|---|
| ಮಂಗಳವಾರದಿಂದ ಶನಿವಾರದವರೆಗೆ | 9.30 ರಿಂದ 1.00 | 2.00 ರಿಂದ 6.00 | ಸೋಮವಾರ |
| ಭಾನುವಾರ | 9.30 ರಿಂದ 1.00 | ರಜಾ | |

ಅಪೆಕ್ಸ್ ಬ್ಯಾಂಕ್‌ನ ಎಲ್ಲಾ ರಜೆಗಳೂ (ವಾರದ ರಜಾ ಹೊರತು ಪಡಿಸಿ) ಅನ್ವಯಿಸುತ್ತವೆ.

ನಿರ್ದೇಶಕರುಗಳು :

ಶ್ರೀ ಕೆ. ಭಗವಾನ್ ದಾಸ್ ರೈ
ಶ್ರೀ ಹರಿಪ್ರಸಾದ್ ಎಸ್. ಶೆಟ್ಟಿ
ಶ್ರೀ ಬಿ. ಸಂತೋಷ್‌ಕುಮಾರ್ ಶೆಟ್ಟಿ
ಶ್ರೀ ಚಂದ್ರಹಾಸ್ ರೈ. ಡಿ
ಶ್ರೀ ಕೆ. ಪ್ರಮೋದ್‌ಚಂದ್ರ ಭಂಡಾರಿ
ಶ್ರೀಮತಿ ಮಂಜುಳಾ ಎಸ್. ಶೆಟ್ಟಿ
ಶ್ರೀಮತಿ ಸರ್ವಾಣಿ ಜಿ. ರೈ

ಸ್ಥಾಪಕ ಅಧ್ಯಕ್ಷರು : ದಿ॥ ಡಾ॥ ಐ.ವಿ. ಶೆಟ್ಟಿ – 1997
ಶ್ರೀ ಕೆ.ಆರ್. ಶೇಷಾದ್ರಿ – ಕಾರ್ಯದರ್ಶಿ

ಶ್ರೀ ಇರ್ಮಾಡಿ ಜಯಪ್ರಸಾದ್ ಶೆಟ್ಟಿ
ಅಧ್ಯಕ್ಷರು

ಶ್ರೀ ಹೆಚ್. ಶ್ರೀಧರ್ ಹೆಗ್ಡೆ
ಉಪಾಧ್ಯಕ್ಷರು

ADVT

# ಬಂಟರ ಸಂಘ ಬೆಂಗಳೂರು

## ಚುನಾವಣೆ: 2022-24

**ಬೆಂಗಳೂರು ಬಂಟ ಬಾಂಧವರಲ್ಲಿ ವಿನಮ್ರ ವಿನಂತಿ,**

ಸರಿ ಸುಮಾರು ಎರಡು ದಶಕಗಳಿಂದ ಬೆಂಗಳೂರು ಬಂಟರ ಸಂಘದೊಂದಿಗೆ ಹಾಗೂ ಸದಸ್ಯರೊಂದಿಗೆ ನಿರಂತರ ಸಂಪರ್ಕದಲ್ಲಿದ್ದವನು ನಾನು. ಉಪ ಸಮಿತಿಯ ಸದಸ್ಯನಾಗಿ ಎರಡು ಬಾರಿ ಕಾರ್ಯಕಾರಿ ಸಮಿತಿಯ ಸದಸ್ಯನಾಗಿ ಸಂಘಕ್ಕೆ ಹಾಗೂ ಸಮುದಾಯಕ್ಕೆ ನನ್ನ ಅಳಿಲು ಸೇವೆಯನ್ನು ಸಲ್ಲಿಸಿದ್ದೇನೆ. ವೈದ್ಯಕೀಯ ವಿಭಾಗದ ಚೇರ್‌ಪರ್ಸನ್ ಆಗಿ ಆರೋಗ್ಯ ವಿಮಾ ವಿಭಾಗದ ಚೇರ್‌ಪರ್ಸನ್ ಆಗಿ ಸಮುದಾಯ ಸೇವೆಯಲ್ಲಿ ನನಗೆ ಸಿಕ್ಕ ಅವಕಾಶವನ್ನು ಸಾರ್ಥಕವಾಗಿ ಬಳಸಿಕೊಂಡಿದ್ದೇನೆ.

ಮುಂಬರುವ ಬೆಂಗಳೂರು ಬಂಟರ ಸಂಘದ ಚುನಾವಣೆಯಲ್ಲಿ **ಉಪಾಧ್ಯಕ್ಷ** ಸ್ಥಾನಕ್ಕೆ ಸೇವಾಕಾಂಕ್ಷಿಯಾಗಿದ್ದು, ತಮ್ಮೆಲ್ಲರ ಸಹಕಾರ, ನಿರ್ದೇಶನ ಹಾಗೂ ಶುಭಾಶೀರ್ವಾದಳಿಗಾಗಿ ವಿನಂತಿಸುತ್ತಿದ್ದೇನೆ.



ಇಂತಿ ನಿಮ್ಮವ

**ಡಾ. ಜಗದೀಶ್ ವಿ. ಶೆಟ್ಟಿ**

ಮಾಜಿ ಕಾರ್ಯಕಾರಿ ಸಮಿತಿ ಸದಸ್ಯ
2014-16 ಮತ್ತು 2016-2018
ಮೆಡಿಕಲ್ ಡೈರೆಕ್ಟರ್
ಪ್ರೀಮಿಯರ್ ಸಂಜೀವಿನಿ ಹಾಸ್ಪಿಟಲ್
ಮೊ : 99809 96039

**‘ಸಮುದಾಯದ ಅಭಿವೃದ್ಧಿಗಾಗಿ ಸಮಗ್ರ ತಂಡದ ಆಯ್ಕೆ’**

ADVT.

REGISTERED KA/BGW-1589/2021-2023 RNI NO: KARBIL/2005/16402, Date of publication 07.3.2022
Licenced post without prepayment License No. WPP-219, Total No. of page 36+4=40
Licenced to post at Bangalore PSO, Mysore Road, Bengaluru-560026, on 10th or 12th of every Month



## ಸಮುದಾಯ ಬಾಂಧವರೇ,

ನಾನು ಬೆಂಗಳೂರು ಬಂಟರ ಸಂಘದ ಆಡಳಿತ ಮಂಡಳಿಗೆ ನಡೆಯಲಿರುವ ಮುಂದಿನ ಚುನಾವಣೆಯಲ್ಲಿ **ಗೌರವ ಕಾರ್ಯದರ್ಶಿ** ಸ್ಥಾನಕ್ಕೆ ಸ್ಪರ್ಧಿಸುತ್ತಿದ್ದು ಮೊದಲಾಗಿ ತಮ್ಮೆಲ್ಲರ ಸಮ್ಮತಿ, ಆಶೀರ್ವಾದವನ್ನು ಯಾಚಿಸುತ್ತಿದ್ದೇನೆ. ಸಮುದಾಯದ ಹಿರಿಯರು ಮತ್ತು ಕೊಡುಗೈ ದಾನಿಗಳು ಸಾಮಾಜಿಕ ಕಳಕಳಿಯೊಂದಿಗೆ ಕಟ್ಟಿ ಬೆಳೆಸಿದ ಸಂಘ ನಮ್ಮದು. ಸಂಘದ ಸರ್ವಾಂಗೀಣ ಏಳ್ಗೆಗಾಗಿ ಎಲ್ಲಾ ವರ್ಗದ ಸದಸ್ಯರುಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕೆಲಸ ಮಾಡಬೇಕೆಂಬ ಹಂಬಲ ನನ್ನದು. ಬಂಟರ ಸಂಘವನ್ನು ವೇದಿಕೆಯಾಗಿರಿಸಿಕೊಂಡು ಸಮುದಾಯ ಕೇಂದ್ರಿತ ಮತ್ತು ಹಿಂದುಳಿದವರ ಪರವಾದ ಕೆಲಸಗಳಿಗೆ ಹೆಚ್ಚಿನ ಸಮಯ ಮತ್ತು ಶ್ರಮವನ್ನು ವಿನಿಯೋಗಿಸುವ ಪಣ ತೊಡುತ್ತ ತಮ್ಮೆಲ್ಲರ ತುಂಬು ಮನಸ್ಸಿನ ಸಹಕಾರ ಬಯಸುತ್ತೇನೆ.

ಇಂತಿ ನಿಮ್ಮವ

**ಆನಂದರಾಮ ಶೆಟ್ಟಿ ಬಿ.**

ಗೌ॥ ಕಾರ್ಯದರ್ಶಿ ಸ್ಥಾನದ ಅಭ್ಯರ್ಥಿ

ಮೊ : 94480 58564, 9632991122

**'ಸಮುದಾಯದ ಅಭಿವೃದ್ಧಿಗಾಗಿ ಸಮಗ್ರ ತಂಡದ ಆಯ್ಕೆ'**

Cave-n-Dine
Fine Dine Family Restaurant

POORNIMA SCREENS

Cave-n-Dine E cavendine@yahoo.com

Delicious Cuisine
Memorable Ambience

First of its kind restaurant in Bengaluru... in a Cave Setting...

Cave-n-Dine Fine Dine Family Restaurant



Upendra Shetty
Managing Director



Anandram Shetty B
Director

#12, 4th Stage, 3rd Block, Basaveshwaranagar, Bengaluru 560079

Cave-n-Dine E cavendine@yahoo.com

For table reservations, please call
9632991122 / 9632994411

www.cavendine.com

ADVT

Printed and Published by : Sri Madhukar M. Shetty on Behalf of Bunts' Sangha Bangalore
#324, Bunts' Sangha Complex, Chord Road, Vijayanagar, Bengaluru - 560 040. Editor : M. Muralidhara Hegde
Printed at Sairam Printers, Vijayanagar, Bengaluru - 560 040. Mob : 9845630847